ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

- ನೈಸರ್ಗಿಕ ಕೃಷಿ
- ಇತಿಹಾಸದ ವ್ಯಾಖ್ಯೆ
- ನಮ್ಮ 'ನಾಗರಿಕತೆ' ಯ ಕುರಿತು

ಗ್ರಾಮೋದ್ಯೋಗಗಳು

ಸಂಪುಟ : ೧೧ ನವೆಂಬರ್ ೧೯೯೦ ಸಂಚಿಕೆ : ೫

ಈ ಸಂಚಿಕೆಯಲ್ಲಿ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ಸಂಪುಟ: ೧೧ ಮೇಲುಕೋಟೆ. ನವೆಂಬರ್ ೧೫, ೧೯೯೦ ಸಂಚಿಕೆ ೫

ನಿಮ್ಮೊಂದಿಗೆ ....

ಅಯೋಧ್ಯಾರಾಮ ಪ್ರಕರಣ ಈ ದೇಶವನ್ನು ಬೆಚ್ಚಿಸಿದೆ. ಪ್ರಾಯಶಃ ಈಗಿನ ಹದಗೆಟ್ಟ ಹಿಂದೂ – ಮುಸ್ಲಿಂ ಬಾಂಧವ್ಯವನ್ನು ನೆಟ್ಟಗಾಗಿಸಲು ಹಲವಾರು ದಶಕಗಳೇ ಬೇಕು.

ನಮ್ಮ ಮಧ್ಯೆಯೇ ಸುಪ್ತವಾಗಿದ್ದ ಈ ಕೋಮು ವಿಷದ ಇರವಿನ ಅರಿವೂ ಇಲ್ಲದಂತೆ ಇಷ್ಟುದಿನ ನಾವು ಹೇಗೆ ಇದ್ದೆವು ?

ತೋಳ್ಬಲದ ಮೂಲಕ ಅಂಜಿಕೆ ಹುಟ್ಟಿಸಿ ಮೀಸೆ ತಿರುಗಿಸುವ ಪಾಳೇಗಾರಿಕೆ ಪ್ರವೃತ್ತಿ ಈ ದೇಶದ ಜಾತಿ ಪದ್ಧತಿಯಲ್ಲಷ್ಟೇ ಅಲ್ಲ, ಸಾಮಾಜಿಕ ಧೋರಣೆಯಲ್ಲೇ ಹಾಸುಹೊಕ್ಕಾಗಿದೆ ಅನಿಸುತ್ತೆ. ಗಾಂಧಿಯ ಪ್ರಭಾವ ಈ ಪ್ರವೃತ್ತಿ ಅತಿಗೆ ಹೋಗದಂತೆ ಇಷ್ಟುದಿನ ತಡೆದಿತ್ತು. ಧರ್ಮಾಭಿಮಾನದ ಅತಿಯನ್ನು ಮಾನವ ಪ್ರೀತಿಯ ಭಂಗಿಗಳಿಂದ ತಡೆಯುವುದು ಸಾಧ್ಯ. ಆದರೆ ಆಗ ಬಳಸುತ್ತಿದ್ದ ಪದಗುಚ್ಛಗಳು, ಸಾಂಕೇತಿಕ ಕ್ರಿಯೆಗಳನ್ನೆಲ್ಲಾ ಪುಢಾರಿಗಳು ಹೈಜಾಕ್ ಮಾಡಿದ್ದರಿಂದಾಗಿ ಅವೂ ಅರ್ಥ ಕಳಕೊಂಡಿವೆ.

ಈ ಆಸ್ಫೋಟಕ ಹಂತ ತಲುಪುವುದಕ್ಕೆ ಕೆಲವು ಕಾರಣಗಳನ್ನು ಹುಡುಕಬಹುದು.

೧. ಚರಿತ್ರೆಯ ಒಂದು ಹಂತದ ಬೆಳವಣಿಗೆಯೇ ನಮ್ಮ ದುಸ್ಥಿತಿಗೆ ಕಾರಣ ಎಂಬ ನಂಬಿಕೆ. ಇದು ವಸಾಹತು ಶಾಹಿಯ ಕೊಡುಗೆ. ಆದರೆ ಈ ದುಸ್ಥಿತಿಗೆ ಮುಸ್ಲಿಂ ಆಗಮನ ಕಾರಣ ಎಂದು ಭ್ರಮೆ ಕುದುರಿಸುವಲ್ಲಿ ನಮ್ಮ ಕೋಮುವಾದೀ ಚರಿತ್ರೆಯ ಓದು ಕಾರಣವಾಗಿದೆ. ಸಂಸ್ಕೃತಿಯ ಅರ್ಥವನ್ನು ದೇವಾಲಯಗಳ ಪೂಜೆ ಪುರಸ್ಕಾರಗಳಿಗೆ ಮಿತಿಗೊಳಿಸುವ ಮಂದಿ ಈ ವ್ಯಾಖ್ಯೆಯನ್ನು ಬಳಸಿಕೊಂಡಿದ್ದಾರೆ. ಮುಸ್ಲಿಮರನ್ನು ಹೊರಗಿನವರು ಎಂದು ಭಾವಿಸುವ ಮಟ್ಟಿಗೆ ಇದು ವಿಕೃತವಾಗಿದೆ.

೨. ನೆಹರೂ ನಂತರದ ಕಾಂಗ್ರೆಸ್ ತನ್ನ ಮತಗಳಿಕೆಯ ದೃಷ್ಟಿಯಿಂದ ಅಲ್ಪ ಸಂಖ್ಯಾತರನ್ನು ಬಳಸಿಕೊಂಡಿತು. ಈ ತಂತ್ರದಲ್ಲಿ ಕಾಂಗ್ರೆಸ್ ಮಣೆಹಾಕಿದ್ದು ಅಪಾತ್ರರಿಗೆ. ಒಳ್ಳೆಯ ಕೋಮಿನ ನಾಯಕತ್ವ ಅಪಾತ್ರರ ಪಾಲಾದಾಗ ಆ ಕೋಮೂ ದಿಕ್ಕೆಡುತ್ತದೆ; ಉಳಿದವರ ಜಿಗುಪ್ಸೆಯನ್ನೂ ಆಹ್ವಾನಿಸುತ್ತದೆ.

ಭಾಜಪ, ವಿ. ಹಿಂ. ಪ – ಹಿಂದೂ ಕೋಮುಗಳ ಒಳಗಿನ ಈ ಒಡಕ್ಕಿಗೆ ಜಾಣ ಕುರುಡುತನ ತೋರಿಸುತ್ತಾ, ಮುಸ್ಲಿಂ ಸಮಸ್ಯೆಯನ್ನಷ್ಟೇ ಗುರಿಯಾಗಿಡುವ ನೀಚ ಜಾಣತನ ಪ್ರದರ್ಶಿಸಿವೆ.

೩. ಈ ರೀತಿಯ ಧರ್ಮಾಂಧತೆ ನಮ್ಮಲ್ಲಿ ಬೃಹತ್ ಸ್ವರೂಪ ಪಡೆಯುವ ಸಾಧ್ಯತೆ ಇಲ್ಲಾ ಎಂಬ ಭ್ರಮೆ ನಮ್ಮ ಶಿಕ್ಷಿತ ವಿಚಾರವಾದಿ ವರ್ಗಕ್ಕೆ ಇತ್ತು. ಚುನಾವಣಾ ಲೆಕ್ಕಾಚಾರ ಬೇರೆ. ಭಾಜಪದ ಭ್ರಮೆ ಅಲ್ಲಿ ಹರಿಯುತ್ತದೆ ಎಂದು ನೆಮ್ಮದಿ ಪಡುವವರನ್ನು ನಾನು ನೋಡಿದ್ದೇನೆ.

'ಸಮೃದ್ಧ ಮತ್ತು ಬಲಿಷ್ಠ ಜರ್ಮನಿ' ಎಂದು ಮೂವತ್ತರ ದಶಕದ ಆರಂಭದಲ್ಲಿ ಹಿಟ್ಲರ್ ಹೇಳಿದಾಗ ಅವನ ವಾಚಾಳಿತನ, ಮಾತಿನ ನಾಟಕೀಯತೆಯನ್ನು ಭ್ರಮೆ ಎಂದು ಗೇಲಿ ಮಾಡಿದ್ದರು. ಜನಾಂಗೀಯ ಸಿದ್ಧಾಂತ ಸಮೂಹದ ಮನ್ನಣೆ ಪಡೆಯುವುದು ಅಸಾಧ್ಯ ಎಂದು ಜನ ಭಾವಿಸಿದ್ದರು. ಜರ್ಮನಿಯ ಅವಮಾನ, ದಾರಿದ್ರ್ಯಗಳಿಗೆ ಆತ ಯಹೂದಿಗಳನ್ನು ಬೆಟ್ಟು ಮಾಡಿದಾಗ ಈ ಹುಚ್ಚಿಗೆ ಅಲಗಿನ ಹರಿತ ಒದಗಿ ಬಂತು. ಈ ಅತಿ ಎಲ್ಲಿ ನಿಜವಾದೀತು ಎಂಬ ಲಘುಲೇವಡಿ ಯುರೋಪನ್ನು ಮುಕ್ಕಿ ತಿಂದಿತು.

ಎರಡನೇ ಮಹಾಯುದ್ಧದ ಬಳಿಕ ಹಿಟ್ಲರನ ಉಗಮಕ್ಕೆ ಏನು ಕಾರಣ, ಯಾರು ಕಾರಣ ಎಂಬ ಪೋಸ್ಟ್‌ಮಾರ್ಟಂ ಚರ್ಚೆಯಲ್ಲಿ ಯುರೋಪು ತೊಡಗಿತು. ಯಾರ ಮೇಲಾದರೂ ಬೆಟ್ಟು ಮಾಡುವ ಪ್ರವೃತ್ತಿಯ ಈ ವೃಥಾ ಚರ್ಚೆ ಹೆಚ್ಚಾದಾಗ, ಫ್ರಾನ್ಸಿನ ಮಹಾನ್ ಲೇಖಕ ಸಾರ್ತ್ರೆ (ಈತ ಹಿಟ್ಲರನ ವಿರುದ್ಧ ಹೋರಾಡಿದ್ದ) 'ಹಿಟ್ಲರ ಬಲಗೊಳ್ಳಲು ನಾನು ಕಾರಣ' ಎಂದು ಹೇಳಿದ್ದ.

ಒಂದು ದುರಂತಕ್ಕೆ ವೈಯಕ್ತಿಕವಾಗಿ ನಾನು ಕಾರಣನಿದ್ದೇನು ಎಂಬ ಆಪ್ತ ಆತ್ಮವಿಮರ್ಶೆಯ ಇಂಥಾ ದಿಟ್ಟ ನಿಲುವಷ್ಟೇ ಇಂದಿನ ಸ್ಥಿತಿಗೆ ಪರಿಹಾರ ಹುಡುಕಲು ಮಾರ್ಗವಾದೀತು.

– ಕೆ. ಪಿ. ಸುರೇಶ್

ಸಂಪಾದಕ ಮಂಡಳಿಯ ಪರವಾಗಿ

ನೈಸರ್ಗಿಕ ಕೃಷಿ

—ಪಾಂಡುರಂಗ ಹೆಗಡೆ

[ಜನಪದ ಸೇವಾ ಟ್ರಸ್ಟ್ ಪ್ರಕಟಿಸಬೇಕೆಂದಿರುವ 'ಪರ್ಯಾಯ ಕೃಷಿ ಕೈಪಿಡಿ' ಗ್ರಂಥದ ಭಾಗ]

ಫುಕುವೊಕಾ ಅವರ ಅನುಭವವನ್ನು ಆಧಾರಿಸಿ ಬಂದಿರುವ ಪುಸ್ತಕ 'ಒಂದು ಹುಲ್ಲಿನ ಕ್ರಾಂತಿ' ಭಾರತದ ಹಲವಾರು ಭಾಷೆಗಳಲ್ಲಿ ಪ್ರಕಟವಾಗಿದೆ. ಕನ್ನಡದಲ್ಲಿ ಪ್ರಕಟಿತವಾದ ನಂತರ ಸಾವಿರಾರು ರೈತರು ಈ ಪುಸ್ತಕವನ್ನು ಓದಿ ನೈಸರ್ಗಿಕ ಕೃಷಿ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಂಡು ತಮ್ಮ ಹೊಲ ಗದ್ದೆಗಳಲ್ಲಿ ಈ ಹೊಸ ರೀತಿಯ ಕೃಷಿ ಪದ್ಧತಿಯನ್ನು ಅನುಸರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾರೆ.

ಜಪಾನ ಪ್ರವಾಸದಲ್ಲಿದ್ದಾಗ ನನಗೆ ಫುಕುವೊಕಾ ಅವರನ್ನು ಭೇಟಿಯಾಗುವ, ಅವರ ಗದ್ದೆ ತೋಟಗಳನ್ನು ನೋಡುವ ಅವಕಾಶ ಒದಗಿ ಬಂದಿತ್ತು. ನಾನು ಅವರಲ್ಲಿ ಹೋದಾಗ ಪ್ರತ್ಯಕ್ಷವಾಗಿ ನೋಡಿದ ಸಂಗತಿಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ಜಪಾನಿನ ಮುಖ್ಯ ಭೂ ಭಾಗದ ದಕ್ಷಿಣದಲ್ಲಿ ಶಿಕೋಕು ಎಂಬ ಸುಂದರ ದ್ವೀಪವಿದೆ. ಮಲೆನಾಡಿನಂತೆ ಹಸಿರು ಗುಡ್ಡ ಬೆಟ್ಟಗಳ ಮಧ್ಯೆ ಬಯಲಿನಲ್ಲಿ ಭತ್ತದ ಗದ್ದೆ ಹಬ್ಬಿಕೊಂಡಿದೆ. ಈ ದ್ವೀಪದ ಒಂದು ಗುಡ್ಡದ ತಪ್ಪಲಿನಲ್ಲಿ ಫುಕುವೊಕಾರ ಪರಂಪರಾಗತವಾದ ಹಂಚಿನ ಮನೆ ಇದೆ. ಮನೆಯ ಅಂಗಳದಲ್ಲಿನ ಅರಳಿದ ಹೂವಿನ ತೋಟವನ್ನು ನೋಡುತ್ತಿದ್ದ ಹಾಗೆ ಬಿಳಿ ಕೂದಲಿನ, ಚಿಕ್ಕ ಆಕೃತಿಯ ನೀಲಿ ನಿಲುವಂಗಿಯನ್ನು (ಜಪಾನಿನ ರೈತರು ತೊಡುವ ಬಟ್ಟೆ) ತೊಟ್ಟ ಫುಕುವೊಕಾ ತಮ್ಮ ಬೌದ್ಧ ಸನ್ಯಾಸಿಯ ಜೊತೆ ಬಂದು ನಮ್ಮನ್ನು ಸ್ವಾಗತಿಸಿದರು. ಫುಕುವೊಕಾರವರಿಗೆ ಜಪಾನಿ ಭಾಷೆ ಬಿಟ್ಟು ಬೇರೆ ಯಾವ ಭಾಷೆಯೂ ಬರುತ್ತಿಲ್ಲವಾದ್ದರಿಂದ ನನ್ನ ಜೊತೆಯಲ್ಲಿ ಅಲ್ಪ ಸ್ವಲ್ಪ ಇಂಗ್ಲೀಷ ಬಲ್ಲ ಜಪಾನಿ ಯುವಕನನ್ನು ಭಾಷಾಂತರ ಮಾಡಲು ಕರೆದುಕೊಂಡು ಬಂದಿದ್ದೆ.

ಎಪ್ಪತ್ತೈದು ವರ್ಷಗಳಾದರೂ ಹೊಳಪುಗಣ್ಣಿನ ಫುಕುವೊಕಾ ಲವಲವಿಕೆಯಿಂದ ಓಡಾಡುತ್ತಾ ಭಾರತೀಯರ ಹಾಗೆ ಅತಿಥಿ ಸತ್ಕಾರ ಮಾಡಿ ಜಪಾನೀ ಚಹಾ ಕುಡಿಸಿದರು. ಅವರ ಮನೆಯೂ ಪರಂಪರಾಗತವಾದ ಜಪಾನೀ ಮನೆಗಳಂತೆ ಇದೆ. ಕುಳಿತುಕೊಳ್ಳಲು ಮೇಜು – ಕುರ್ಚಿಯ ಬದಲಾಗಿ ನೆಲದ ಮೇಲೆ ಸಾಧಾರಣವಾಗಿ ಹಾಸಿದ ಕಂಬಳಿ. ಮೇಜಿನ ಬದಲಾಗಿ ಅಗಲವಾಗಿರುವ ನೆಲದಿಂದ ಸ್ವಲ್ಪ ಎತ್ತರ ಇರುವ ಕಟ್ಟಿಗೆಯ ದಿಬ್ಬ. ಚಹಾ ಪಾನ ಆದ ನಂತರ ಅವರು ತಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿರುವ ಭತ್ತದ ಗದ್ದೆಗೆ ಕರೆದೊಯ್ದರು.

ನಾವು ಹೋದಾಗ ಮಾರ್ಚ್ ೧೯೮೮. ಅವರ ಹೊಲದಲ್ಲಿ 'ಕ್ಲೋವರ್' ಎಂಬ ಮೇವಿನ ಫಸಲು ಹಸಿರಿನಿಂದ ಕಂಗೊಳಿಸುತ್ತಿತ್ತು. ಫುಕುವೊಕಾ ಈ ಗದ್ದೆಯ ಹಸಿರನ್ನು ಕೆದಕಿ ಅದರ ಬುಡದಲ್ಲಿ ಮೊಳಕೆಯೊಡೆಯುತ್ತಿದ್ದ ಭತ್ತದ ಬೀಜವನ್ನು ತೋರಿಸಿದರು. ಭತ್ತದ ಫಸಲು ಕೊಯ್ಲಿಗೆ ಬರುವದಕ್ಕಿಂತ ಮುಂಚೆ ಕ್ಲೋವರ ಬೀಜಗಳನ್ನು ಗದ್ದೆಯಲ್ಲಿ ಬೀರಿದ್ದರು. ಭತ್ತವನ್ನು ಕೊಯ್ಯುವಾಗ ಮೊಳಕೆಯೊಡೆದಿದ್ದ ಕ್ಲೋವರ್ ಇಂದು ಇಡೀ ಹೊಲವನ್ನು ಆಕ್ರಮಿಸಿದೆ. ಈ ಬೆಳೆಯ ಮಧ್ಯದಲ್ಲಿ ಭತ್ತದ ಬೀಜವನ್ನು ಬೀರಿದ್ದಾಗಿ ತಿಳಿಸಿದರು.

ತಮ್ಮ ಹಸಿರು ಗದ್ದೆಯ ಮಧ್ಯೆ ಹೋಗಿ ತಮ್ಮ ಕೃಷವಾದ ಕೈಯಿಂದ ಗದ್ದೆಯ ಮಣ್ಣನ್ನು ಕೆದಕಿ ನನ್ನ ಕೈಯಲ್ಲಿ ಕೊಟ್ಟು "ಇದು ಜೀವಂತವಾಗಿರುವ ಮಣ್ಣು, ನಲವತ್ತು ವರ್ಷದಿಂದ ಉತ್ತದೇ ಹೋದರೂ ಸ್ಪಂಜಿನ ಹಾಗೇ ಮೃದುವಾಗಿ ಇದೆ. ಇದರ ಬಣ್ಣ ನೋಡಿ, ಹೇಗೆ ಕಪ್ಪಾಗಿದೆ. ಇದರಲ್ಲಿ ವಾಸಿಸುವ ಸಾವಿರಾರು ಸೂಕ್ಷ್ಮ ಜೀವಾಣುಗಳು ಈ ಮಣ್ಣನ್ನು ಜೀವಂತವಾಗಿ ಮಾಡಿವೆ." ಆ ಕಪ್ಪು ಮಣ್ಣಿನ ತಂಪು ನನ್ನ ಕೈಗೆ ತಗುಲಿದಾಗ ಅದರ ಕಂಪು ಅಹ್ಲಾದಕರವಾಗಿತ್ತು. ತಮ್ಮ ಒಂದೂ ಕಾಲು ಎಕರೆ ಗದ್ದೆಯಲ್ಲಿ ನಲವತ್ತು ವರ್ಷಗಳಿಂದ ಉಳುಮೆ ಮಾಡದಿದ್ದರೂ ಸಹ ಮಣ್ಣಿನಲ್ಲಿರುವ ಎರೆಹುಳು ಮತ್ತು ಇದರ ಸೂಕ್ಷ್ಮ ಜೀವಾಣುಗಳು ಈ ಭೂಮಿಯಲ್ಲಿ ಉಳುಮೆಯ ಕೆಲಸವನ್ನು ನಿರಂತರವಾಗಿ ಮಾಡಿಕೊಂಡು ಬಂದಿರುವದರಿಂದ ಫಲವತ್ತತೆಯನ್ನು ಕಾಪಾಡಿಕೊಂಡು ಬರಲು ಸಾಧ್ಯವಾಗಿದೆ ಎಂದರು. ಈ ಮಣ್ಣು ಉಸಿರಾಡಲು ಈ ಜೀವಿಗಳು ಸಹಕರಿಸುತ್ತವೆ. ಕಳೆದ ನಲವತ್ತು ವರ್ಷಗಳಿಂದ ಉತ್ತದೆ, ಗೊಬ್ಬರವಿಲ್ಲದೆ, ಕಳೆಯನ್ನು ಕೀಳದೆ, ಆಧುನಿಕ ಕೃಷಿಗೆ ಸರಿಸಮಾನವಾಗಿ ಇಳುವರಿಯನ್ನು ಅವರು ಪಡೆಯುತ್ತಿದ್ದಾರೆ.

ಜಪಾನಿನಲ್ಲಿ ಸಹ ನಮ್ಮಲ್ಲಿರುವ ಹಾಗೆ ಗದ್ದೆಗೆ ಗೊಬ್ಬರ ಹಾಕಿ, ನಾಟಿಮಾಡಿ, ನೀರು ನಿಲ್ಲಿಸಿ, ಕಳೆಯನ್ನು ಕಿತ್ತು ಭತ್ತ ಬೆಳೆಸುವ ಪರಿಪಾಠ ನೂರಾರು ವರ್ಷಗಳಿಂದ ನಡೆದು ಬಂದಿತ್ತು. ಆದರೆ ಈ ಪದ್ಧತಿಯಲ್ಲಿ ಅನಾವಶ್ಯಕವಾಗಿ ಕೆಲಸ ಹೆಚ್ಚಿದೆ ಎಂದು ಫುಕುವೊಕಾರ ಅನಿಸಿಕೆ. ಹೊಲದಲ್ಲಿ ನಿರಂತರವಾಗಿ ಏನಾದರೊಂದು ಫಸಲು

ಬೆಳೆಯುತ್ತಿರುತ್ತದೆ. ಮಣ್ಣಿನ ಮೇಲೆ ಈ ನಿರಂತರವಾಗಿರುವ ಕವಚದ ಮಧ್ಯದಲ್ಲಿ ಬೀಜವನ್ನು ಬೀರುತ್ತಾರೆ. ಪ್ರತಿಯೊಂದು ಬೆಳೆ ತೆಗೆದುಕೊಂಡಾಗಲೂ ಅದರ ಹುಲ್ಲನ್ನು ಪುನಃ ಗದ್ದೆಗೆ ಮರಳಿಸುತ್ತಾರೆ. ಈ ಹುಲ್ಲನ್ನು ಹೊಲದಲ್ಲಿ ಹರಡಿದಾಗ ಅದು ಕಳೆ ಮೇಲೆ ಏಳದಂತೆ ತಡೆಯುತ್ತದೆ. ಜೊತೆಗೆ ಭೂಮಿಯಿಂದ ಪಡೆದು ಕೊಂಡ ಸಾರವನ್ನು ಪುನಃ ಹಿಂತಿರುಗಿಸುತ್ತದೆ. ಗದ್ದೆಯಲ್ಲಿ ಯಾವ ಸಮಯದಲ್ಲಿ ಯಾವ ಬೀಜವನ್ನು ಬೀರಬೇಕು, ನೀರನ್ನು ಯಾವ ಪ್ರಮಾಣದಲ್ಲಿ ಬಿಡಬೇಕು, ಹುಲ್ಲನ್ನು ಕೊಳೆಯಿಸಲು ಎಷ್ಟು ತೇವಾಂಶ ಬೇಕು ಇವುಗಳನ್ನು ಅರಿತುಕೊಳ್ಳಲು ಫುಕುವೊಕಾರಿಗೆ ಹಲವಾರು ದಶಕಗಳೇ ಹಿಡಿದುದ್ದಾಗಿ ತಿಳಿಸಿದರು. ಇದನ್ನು ಅರಿಯಲು ರೈತನು ತನ್ನ ಗದ್ದೆಯಲ್ಲಿ ಬೆಳೆಯುವ ಫಸಲನ್ನು, ಮಣ್ಣನ್ನು, ಸುತ್ತಲಿನ ಪರಿಸರವನ್ನು ಬಹಳ ಸೂಕ್ಷ್ಮವಾಗಿ ತಿಳಿಯುವದು ಅವಶ್ಯಕವಾಗಿದೆ. ಈ ತರಹ ಹಲವಾರು ವರ್ಷ ತಮ್ಮ ಹೊಲದಲ್ಲಿ ಪ್ರಯತ್ನ ಮಾಡಿ ನೈಸರ್ಗಿಕ ಕೃಷಿಯ ವಿಚಾರ ಧಾರೆಯನ್ನು ಜಗತ್ತಿಗೆ ನೀಡಿದ್ದಾರೆ.

ಈ ಗದ್ದೆಯಿಂದ ಎರಡು ಕಿ. ಮೀ. ದೂರದಲ್ಲಿ ಗುಡ್ಡದ ಮೇಲೆ ಇರುವ ಕಿತ್ತಳೆ ಹಣ್ಣಿನ ತೋಟವನ್ನು ನೋಡಲು ಕೊಂಡೊಯ್ದರು. ಹನ್ನೆರಡು ಎಕರೆ ವಿಸ್ತಾರವಾಗಿರುವ ಈ ಹಸಿರು ಕ್ಷೇತ್ರವನ್ನು ಪ್ರವೇಶಿಸುತ್ತಿದ್ದ ಹಾಗೆ ಕಿತ್ತಳೆ ಗಿಡದಲ್ಲಿ ಗೊಂಚಲು ಗೊಂಚಲಾಗಿ ಜೋತು ಬೀಳುತ್ತಿರುವ ದೊಡ್ಡ ಕಿತ್ತಳೆ ಹಣ್ಣು (ಮಾಂಡರಿನ ಆರೇಂಜ್, ನಮ್ಮಲ್ಲಿಯ ಕಿತ್ತಳೆಗಿಂತ ಬಹಳ ದೊಡ್ಡದು) ಆಕರ್ಷಕವಾಗಿ ಕಾಣುತ್ತಿತ್ತು. ಈ ಕಿತ್ತಳೆ ಗಿಡಗಳ ಮಧ್ಯದ ಸ್ಥಳಗಳಲ್ಲಿ ಹುಲ್ಲಿನ ಮಧ್ಯೆ ತರಕಾರಿ ಬೀಜವನ್ನು ಬೀರಿದ್ದರು. ಒಂದೆಡೆಗೆ ಹುಲ್ಲಿನ ಮಧ್ಯೆ ಕೈಹಾಕಿ ಫುಕುವೊಕಾ ದೈತ್ಯಾಕಾರದ ಒಂದು ದೊಡ್ಡ ಮೂಲಂಗಿಯನ್ನು ನೆಲದಿಂದ ಅಲುಗಿಸಿ ತೆಗೆದರು. ಅದನ್ನು ನನ್ನ ಕೈಗೆ ನೀಡಿದಾಗ ನಾನು ಆಶ್ಚರ್ಯಪಡುವಂತಾಯಿತು. ಎರಡು ಅಡಿ ಉದ್ದವಿರುವ ಮನುಷ್ಯನ ಕೈಗಾತ್ರದ ಇಂಥ ಮೂಲಂಗಿಯನ್ನು ನಾನು ನೋಡಿದ್ದು ಅದೇ ಪ್ರಥಮವಾಗಿತ್ತು. ಇದೇ ರೀತಿ ಈ ತೋಟದ ಮಧ್ಯೆ ಹುಲ್ಲು, ಕಳೆಗಳ ನಡುವೆ ವಿವಿಧ ರೀತಿಯ ತರಕಾರಿಯನ್ನು ಪಡೆಯುತ್ತಾರೆ. ತರಕಾರಿ ಸಸಿಗಳು ಸಸಿಗಳು ಬೇರೂರುವ ವರೆಗೆ ಬುಡದಲ್ಲಿನ ಕಳೆಯನ್ನು ಕಿತ್ತು ಗಿಡದ ಬುಡಕ್ಕೆ ಮುಚ್ಚುತ್ತಾರೆ. ಒಮ್ಮೆ ಗಿಡಬಲಿತಾಗ ಯಾವ ಆರೈಕೆಯನ್ನು ಮಾಡುವುದಿಲ್ಲ. ಕೀಟನಾಶಕ, ಕಳೆನಾಶಕದ ಬಳಕೆಯ ಅವಶ್ಯಕತೆ ಇಲ್ಲ. ಈ ತೋಟದ ಅಂಚಿನಲ್ಲಿ ವಿವಿಧ ತರಹದ ಮರಗಳಿವೆ. ಜೊತೆಗೆ ಬಿದಿರನ್ನು ಸಹ ಬೆಳೆಸಿದ್ದಾರೆ. ಗುಡ್ಡದ ಮೇಲಿರುವ ಈ ತೋಟದಿಂದ ಸುತ್ತಲಿನ ಹಸಿರು ಕಣಿವೆ ಪ್ರದೇಶ ದೂರದಲ್ಲಿರುವ ಹಳ್ಳಿಗಳ ದೃಶ್ಯ ರಮಣೀಯವಾಗಿದೆ.

ಈ ತೋಟದ ಮಧ್ಯದಲ್ಲಿ ಇರುವ ಮಣ್ಣಿನ ಗುಡಿಸಲಿಗೆ ನಮ್ಮನ್ನು ಕರೆದೊಯ್ದರು.

ಯಾವುದೇ ಆಧುನಿಕ ಸೌಲಭ್ಯವಿಲ್ಲದ ಈ ಪುಟ್ಟ ಗುಡಿಸಲಿನಲ್ಲಿ ಫುಕುವೊಕಾ ಅವರು ನಲವತ್ತು ವರ್ಷ ವಾಸಿಸಿದ್ದರು. "ಪ್ರಕೃತಿಯ ಮಧ್ಯೆ ಇರುವ ಈ ಗುಡಿಸಲಿನಲ್ಲಿ ವಾಸಿಸಿ ನೈಸರ್ಗಿಕ ಕೃಷಿ ಪದ್ಧತಿಯ ಅನುಭವದ ಸಾಕ್ಷಾತ್ಕಾರವನ್ನು ಮಾಡಿಕೊಂಡೆ. ಈಗ ವಯಸ್ಸಾಗಿರುವದರಿಂದ ಹಳ್ಳಿಯ ಮನೆಯಲ್ಲಿ ಉಳಿದುಕೊಂಡು ಈ ವಿಚಾರದ ಪ್ರಚಾರ ಕಾರ್ಯದಲ್ಲಿ ತೊಡಗಿದ್ದೇನೆ" ಎಂದು ಹೇಳಿದರು. ಗುಡಿಸಲಿನಲ್ಲಿ ಕುಳಿತು ಕೊಂಡು ಅವರು ನೀಡಿದ ಕಿತ್ತಳೆ ಹಣ್ಣನ್ನು ಸವಿಯುತ್ತಾ ಮಾತನಾಡಿದಾಗಿನ ಕೆಲವು ಅಂಶಗಳು:

ಪ್ರಶ್ನೆ:- ಡಿಸೆಂಬರ್ 1987ರಲ್ಲಿ ನೀವು ಭಾರತದಲ್ಲಿ ಎರಡು ತಿಂಗಳ ಪ್ರವಾಸ ಮಾಡಿ ವಿವಿಧ ಕ್ಷೇತ್ರಗಳನ್ನು ಸಂದರ್ಶಿಸಿದ ನಂತರ ನಿಮ್ಮ ಅನಿಸಿಕೆ ಏನು?

ಉತ್ತರ:- ಭಾರತದ ಜನತೆ ಇನ್ನೂ ನಿದ್ದೆಯಿಂದ ಎಚ್ಚೆತ್ತಿಲ್ಲ. ಗಾಂಧೀಜಿಯವರು ಇವರನ್ನು ಒಮ್ಮೆ ಎಚ್ಚರಿಸಿದ್ದರು. ಆದರೆ ಜನರು ಪುನಃ ನಿದ್ರೆ ಹೋಗಿದ್ದಾರೆ. ಇಂದು ಭಾರತ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಾದ ಬಡತನ, ಬರಗಾಲ, ಮತ್ತು ಪ್ರವಾಹಕ್ಕೆ ನಿಕಟವಾದ ಸಂಬಂಧವಿದೆ. ನಿಮ್ಮ ಜನ ಮಳೆರಾಯನ ವಿಫಲತೆ, ನಿಸರ್ಗದ ವಿಕೋಪ ಎಂದು ಕಾರಣನ್ನು ನೀಡುತ್ತಾರೆ. ಆದರೆ ಈ ಸ್ಥಿತಿಯನ್ನು ನೀವೇ ಸೃಷ್ಟಿಸಿದ್ದೀರಿ. ಭಾರತದಲ್ಲಿ ಎಲ್ಲಿ ನೋಡಿದರೂ ಕಣ್ಣು ಕಾಣಿಸುವವರೆಗೆ ಹಸಿರು ಮರವಿಲ್ಲದೆ ಒಣ ವಿಶಾಲ ಬರಡು ಭೂಮಿ. ಇಂತಹ ಸ್ಥಿತಿಯಲ್ಲಿ ಭಾರತ ಎಂದಿಗೂ ಬಡತನವನ್ನು ನಿವಾರಿಸಲು ಸಾಧ್ಯವಿಲ್ಲ. ದೇಶದ ಮಣ್ಣಿನ ರಕ್ಷಣೆ ಮಾಡದ ಜನ ಬಡತನವನ್ನು, ಬರಗಾಲವನ್ನು ನಿರಂತರವಾಗಿ ಆಹ್ವಾನಿಸುತ್ತಾರೆ.

ಪ್ರಶ್ನೆ : ನೀವು ಕಂಡು ಹಿಡಿದ ಕೃಷಿ ಪದ್ಧತಿಗೆ ಆಧಾರ ಯಾವುದು?

ಉತ್ತರ : ಈ ಕೃಷಿ ಪದ್ಧತಿಗೆ ನಾಲ್ಕು ಆಧಾರ ಸ್ಥಂಭಗಳಿವೆ. ಮೊದಲನೆಯದು, ಭೂಮಿಯನ್ನು ಉತ್ತದೆ ಇರುವದು. ಮನುಷ್ಯ ಅನಾವಶ್ಯಕವಾಗಿ ನೇಗಿಲಿನಿಂದ, ಟ್ರಾಕ್ಟರಗಳಿಂದ ಭೂಮಿಯನ್ನು ಉಳುತ್ತಾನೆ. ಇದರಿಂದ ಭೂಮಿಯು ಹದವಾಗುವ ನೈಸರ್ಗಿಕ ಕ್ರಿಯೆಯಲ್ಲಿ ಅಡಚಣೆಯನ್ನುಂಟು ಮಾಡುತ್ತವೆ. ಭೂಮಿಯಲ್ಲಿನ ಜೀವಾಣುಗಳು, ಎರೆಹುಳು ನಿರಂತರವಾಗಿ ಉಳುಮೆಯ ಕಾರ್ಯವನ್ನು ಮಾಡುತ್ತವೆ.

ಎರಡನೆಯದು, ಗೊಬ್ಬರವನ್ನು ಹಾಕದಿರುವದು. ನಾವು ಬೆಳೆಯುವ ಫಸಲಿಗೆ ಹೊರಗಿನಿಂದ ರಾಸಾಯನಿಕ ಗೊಬ್ಬರ ಅಥವಾ ದಡ್ಡಿ ಗೊಬ್ಬರವನ್ನು ಹಾಕುವ ಆವಶ್ಯಕತೆ ಇಲ್ಲ. ನಾವು ಬೆಳೆಯುವ ಫಸಲಿನ ಧಾನ್ಯವನ್ನು ಮಾತ್ರ ತೆಗೆದುಕೊಂಡು ಅದರ ಉಳಿದ ಹುಲ್ಲು, ಬೇರು, ಎಲೆಗಳನ್ನು ಪುನಃ ಅದೇ ಹೊಲಕ್ಕೆ ಮರಳಿಸಿದರೆ

ಅದೇ ಗೊಬ್ಬರದ ಕೆಲಸವನ್ನು ಮಾಡುತ್ತದೆ.

ಮೂರನೆಯದು, ಹೊಲದಲ್ಲಿ, ತೋಟಗಳಲ್ಲಿ ಕಳೆಯನ್ನು ತೆಗೆಯದೆ ಇರುವುದು. ಈ ಕಳೆಗಳನ್ನು ಸೀಮಿತವಾಗಿಟ್ಟುಕೊಂಡು ಅವುಗಳ ಮಧ್ಯೆ ಬೆಳೆಯನ್ನು ತೆಗೆಯಲು ಸಾಧ್ಯ. ಅನಾವಶ್ಯಕ ಕಳೆಗಳನ್ನು ಹಿಡಿತದಲ್ಲಿಡಲು ವಿವಿಧ ಉಪಾಯಗಳನ್ನು ಕಂಡುಕೊಳ್ಳಬೇಕು. ನಾನು ಭತ್ತದ ಹುಲ್ಲನ್ನು ಹೊಲದಲ್ಲಿ ಮುಚ್ಚುವದರಿಂದ, ಹುಲ್ಲು ಕೊಳೆತು ಕಳೆಯನ್ನು ಮೇಲೇಳಲು ಕೊಡುವದಿಲ್ಲ. ಕಳೆಯನ್ನು ಹಿಡಿತದಲ್ಲಿಡಲು ಫಸಲಿನ ಜೊತೆಗೆ ಇತರ ಬೆಳೆಯನ್ನು ಬೆಳೆಯಬಹುದಾಗಿದೆ.

ನಾಲ್ಕನೆಯದು, ಕ್ರಿಮಿನಾಶಕ, ಕೀಟನಾಶಕದ ಪ್ರಯೋಗ ಮಾಡದಿರುವದು. ಪ್ರಕೃತಿಯಲ್ಲಿ ಕೀಟಗಳನ್ನು ಹತೋಟಿಯಲ್ಲಿಡುವ ಹಲವಾರು ತಂತ್ರಗಳಿಗೆ ಅವನ್ನು ಸೂಕ್ಷ್ಮವಾಗಿ ಗಮನಿಸಿ ಅಂತಹ ಅನುಕೂಲಕರ ವಾತಾವರಣ ನಿರ್ಮಿಸಬೇಕು. ಉದಾಹರಣೆಗೆ ನನ್ನ ತೋಟದಲ್ಲಿ ಅಸಂಖ್ಯ ಜೇಡರ ಬಲೆಗಳು ಕೀಟನಾಶಕದ ಕಾರ್ಯ ನಿರ್ವಹಿಸುತ್ತವೆ. ನಾವು ಬೆಳೆಯುವ ಫಸಲಿನ ಬೀಜಗಳ ತಳಿಗಳು ಸದೃಢವಾಗಿದ್ದರೆ ಕೀಟಗಳ ಹಾವಳಿ ಫಸಲನ್ನು ನಾಶಪಡಿಸಲು ಸಾಧ್ಯವಿಲ್ಲ ಎಂದು ನನ್ನ ಅನುಭವ.

ಪ್ರಶ್ನೆ : ಭಾರತದಲ್ಲಿ ನೀವು ಹೇಳಿದ ಕೃಷಿ ಪದ್ಧತಿಯನ್ನು ಅಳವಡಿಸಲು ಸಾಧ್ಯವೇ?

ಉತ್ತರ : ಖಂಡಿತವಾಗಿ ಸಾಧ್ಯವಿದೆ. ಭಾರತದಲ್ಲಿ ನನ್ನ ವಿಚಾರದ ಸಾಕ್ಷಾತ್ಕಾರಕ್ಕೆ ವಿಪುಲ ಅವಕಾಶಗಳಿವೆ. ನಿಮ್ಮ ಕೃಷಿ ಉತ್ಪನ್ನ ಹೆಚ್ಚಿಸಲು ವಿದೇಶಿ ಆಧಾರಿತ ರಸಗೊಬ್ಬರ ಕೀಟನಾಶಕಗಳಿಂದ ಎಂದಿಗೂ ಸಾಧ್ಯವಿಲ್ಲ. ಇದು ನಿಮ್ಮನ್ನು ಆರ್ಥಿಕವಾಗಿ ಪರದೇಶದ ಗುಲಾಮರನ್ನಾಗಿ ಮಾಡುತ್ತದೆ. ಸ್ವಾವಲಂಬಿಗಳಾಗಿ ಕೃಷಿ ಉತ್ಪನ್ನ ಹೆಚ್ಚಿಸಲು ನಿಮಗಿರುವದು ಒಂದೇ ಮಾರ್ಗ. ಅದು ಮೇಲೆ ಹೇಳಿದ್ದ ಕೃಷಿ ಪದ್ಧತಿಯನ್ನು ಅನುಸರಿಸುವದಾಗಿದೆ. ಇದರಿಂದ ಬಡತನ ನಿವಾರಣೆಯ ಜೊತೆಗೆ ವಿಶ್ವಕ್ಕೆ ಅನ್ನ ನೀಡುವ ದೇಶ ನಿಮ್ಮದಾಗುವದು.

ಪ್ರಶ್ನೆ : ಭಾರತದಲ್ಲಿ ಜಾನುವಾರುಗಳಿಗೆ ಗದ್ದೆಯ ಹುಲ್ಲನ್ನು ನೀಡುತ್ತಾರೆ. ನೀವು ಹೇಳಿದ ಪದ್ಧತಿಯನ್ನು ಅನುಸರಿಸಿ ಈ ಹುಲ್ಲನ್ನು ಗದ್ದೆಗೆ ಹಾಕಿದರೆ ಅವನ್ನು ಅವಲಂಬಿಸಿರುವ ಜಾನುವಾರುಗಳ ಗತಿ ಏನಾದೀತು?

ಉತ್ತರ : ಕೋಟಿಗಟ್ಟಲೆ ಅನಾವಶ್ಯಕ ದನಗಳನ್ನು ಕಡಿಮೆಗೊಳಿಸುವುದು ಅನಿವಾರ್ಯ. ಹಾಲಿಗಿಂತ ಹೆಚ್ಚಾಗಿ ಗೊಬ್ಬರಕ್ಕಾಗಿ ಹಾಗೂ ಗದ್ದೆಯ ಉಳಿಮೆಗಾಗಿ ಜಾನುವಾರುಗಳನ್ನು ಉಪಯೋಗಿಸುವಿರಲ್ಲವೆ? ನಮ್ಮ ಪದ್ಧತಿಗಳಲ್ಲಿ ಇವುಗಳ ಅವಶ್ಯಕತೆ ಇಲ್ಲ. ಆದುದರಿಂದ ಜಾನುವಾರು ಸಂಖ್ಯೆ ಕಡಿಮೆ ಮಾಡಿದರೆ ಅಪಾಯವಿಲ್ಲ. ಉಳಿದ ಜಾನುವಾರುಗಳಿಗಾಗಿ ಈ ಹಿಂದೆ ಮೀಸಲಿಟ್ಟಿರುವ ಹುಲ್ಲುಗಾವಲಿನ ನಿರ್ವಹಣೆ ಸರಿಯಾಗಿ ಆಗಬೇಕಾಗಿದೆ. ಆದರೆ ಇದರಲ್ಲಿ ನೀಲಗಿರಿ ನೆಟ್ಟರೆ

ತೊಂದರೆ ಆಗದೇ ಇದ್ದೀತೆ?
ಭಾರತದಲ್ಲಿ ನಾನು ಕಂಡ ಹಾಗೆ ಜಾನುವಾರುಗಳ ಸಮಸ್ಯೆಗಿಂತ ಗಂಭೀರವಾದ ಸಮಸ್ಯೆ ಭೂಮಿಯ ಹಂಚಿಕೆಯದ್ದಾಗಿದೆ. ಕೆಲವೇ ಜನ ಶ್ರೀಮಂತ ವರ್ಗದವರು ಹೆಚ್ಚಿನ ಕೃಷಿ ಭೂಮಿಯನ್ನು ಹೊಂದಿದ್ದಾರೆ. ಬಡಜನತೆಗೆ ಕೃಷಿ ಭೂಮಿಯ ಮೇಲೆ ಹಿಡಿತವಿಲ್ಲ. ಈ ಅಸಮಾನತೆ ಮೊದಲು ದೂರವಾಗುವದು ಅನಿವಾರ್ಯ.

ಪ್ರಶ್ನೆ : ಜಪಾನಿನಲ್ಲಿ ನಿಮ್ಮ ವಿಚಾರಕ್ಕೆ ಪ್ರಾಮುಖ್ಯ ಯಾಕೆ ಸಿಗುತ್ತಿಲ್ಲ?

ಉತ್ತರ : ಮುಖ್ಯವಾಗಿ ನಾನು ಅನುಸರಿಸುವ ಪದ್ಧತಿ ಸಫಲವಾಗಬೇಕಾದರೆ ಪ್ರಕೃತಿಯ ಜೊತೆ ಒಂದಾಗಿ ಹೊಂದಿಕೊಂಡು ಬಾಳುವ ಹಂಬಲ ಜನರಲ್ಲಿ ಇರಬೇಕು. ಆದರೆ ಇಂದು ಜಪಾನಿನಲ್ಲಿ ಹಣವನ್ನು ಪೂಜಿಸುವ ಸಂಸ್ಕೃತಿ ಹರಡಿಕೊಂಡಿದೆ. ಈ ಭೋಗವಾದಿ ಸಂಸ್ಕೃತಿಯಲ್ಲಿ ನಿಸರ್ಗದಿಂದ ಮನುಷ್ಯ ಇನ್ನಷ್ಟು ದೂರ ಸರಿಯುತ್ತಾನೆ. ಹೀಗಿರುವಾಗ ನನ್ನ ವಿಚಾರ ಜಪಾನಿನಲ್ಲಿ ಚಿಗುರೊಡೆಯುವ ಸಾಧ್ಯತೆ ಕಡಿಮೆ.

ಈ ಮಾತು ಮುಗಿಸಿ ನಾವು ಗುಡ್ಡದಿಂದ ಇಳಿದು ಫುಕೋಕಾರ ಹಳ್ಳಿಗೆ ನಡೆಯುತ್ತಿರುವಾಗ ಹತ್ತಿರದ ಮಾತ್ಸುಯೋಮಾ ಪಟ್ಟಣವು ಹಳ್ಳಿಯ ಅಂಚಿನವರೆಗೆ ಬಂದದ್ದನ್ನು ನೋಡಿದೆ. ಅತೀ ವೇಗದ ಬುಲೆಟ್ ರೈಲಿನ ಕಾಂಕ್ರೀಟ್ ಸೇತುವೆ ಫುಕೋಕಾರ ಗದ್ದೆಯ ಹತ್ತಿರ ಹಾದು ಹೋಗುತ್ತಿದೆ. ಜಪಾನಿನ ಈ ಕಾಂಕ್ರೀಟ್ ಕಾಡು ಫುಕೋಕಾರ ತಪಸ್ಸಿನ ಹೊಲವನ್ನು ಅತಿಕ್ರಮಿಸಿ ನಾಶಪಡಿಸುವ ದಿನ ದೂರವಿಲ್ಲ ಎನಿಸಿತು. ಆದರೆ ಈ ಕೃಷಿಋಷಿಯ ಕ್ರಾಂತಿಕಾರಿ ವಿಚಾರವನ್ನು ನಾಶಪಡಿಸಲು ಸಾಧ್ಯವೆ? ಈಗಾಗಲೇ ಭಾರತವೂ ಸೇರಿದಂತೆ ಹಲವಾರು ದೇಶಗಳಲ್ಲಿ ನೈಸರ್ಗಿಕ ಕೃಷಿಯನ್ನು ಕೃಷಿಕರು ಅಳವಡಿಸತೊಡಗಿದ್ದಾರೆ.

ಇತಿಹಾಸದ ವ್ಯಾಖ್ಯೆ - ಟಿಪ್ಪಣಿ-೧

—ರೋಮಿಲಾ ಥಾಪರ್

(ರೋಮಿಲಾ ಥಾಪರ್ ಭಾರತದ ಖ್ಯಾತ ಇತಿಹಾಸಜ್ಞೆ. ಅವರ Communalism and Writing of Ancient Indian History ಎಂಬ ಪ್ರಬಂಧದ ಸಂಗ್ರಹರೂಪ)

ಪ್ರಚಲಿತ ಕೋಮುವಾದದ ಸೈದ್ಧಾಂತಿಕ ನೆಲೆಯನ್ನು ಗಮನಿಸಿ – ಅದು ಚರಿತ್ರೆಯಲ್ಲಿ ಸಮರ್ಥನೆ ಪಡೆಯಲು ಯತ್ನಿಸುತ್ತಿರುತ್ತೆ. ಹಿಂದೂ ಕೋಮುವಾದಿಗಳು ಪ್ರಾಚೀನ ಭಾರತವನ್ನು ಆದರ್ಶ ಹಿಂದೂ ಸಮಾಜ ಎಂದು ಹೇಳುತ್ತಾರೆ, ನಮ್ಮ ಕಷ್ಟ ಸಂಕಷ್ಟಗಳಿಗೆ ಮುಸ್ಲಿಂ ಆಗಮನವನ್ನು ಕಾರಣವಾಗಿ ಕೊಡುತ್ತಾರೆ. ನಮ್ಮ ಇತಿಹಾಸ ಗ್ರಂಥಗಳಲ್ಲಿ ಈ ಧೋರಣೆ ಇಲ್ಲದೆ ಈ ಸಿದ್ಧಾಂತ ಪ್ರಚಲಿತವಾಗಲು ಹೇಗೆ ಸಾಧ್ಯ?

ನಮ್ಮ ದೇಶದ ಇತಿಹಾಸವನ್ನು ಬರೆಯುವ ಕೆಲಸ ೧೮ ನೇ ಶತಮಾನದಲ್ಲೇ ಆರಂಭವಾಯಿತು. ಪೌರ್ವಾತ್ಯ ಸಂಸ್ಕೃತಿಯ ಬಗ್ಗೆ ಅಭಿಮಾನವಿರಿಸಿಕೊಂಡಿದ್ದ ಯೂರೋಪಿಯನ್ನರು ಈ ದೇಶದ ಪ್ರಾಚೀನ ಸಂಸ್ಕೃತಿಯನ್ನು ಗ್ರೀಕ್ ಸಂಸ್ಕೃತಿ ಜೊತೆ ಸಮೀಕರಿಸಿದರು. ನಮ್ಮ ದೇಶದ ಸಾಂಪ್ರದಾಯಿಕ ಹಿಂದೂಗಳಿಗೆ ಇದು ಅಪ್ಯಾಯಮಾನವಾಯಿತು. ಪೌರ್ವಾತ್ಯ ಸಂಸ್ಕೃತಿಯಲ್ಲಿ ಮ್ಯಾಕ್ಸ್‌ಮುಲ್ಲರ್ ಮತ್ತಿತರರು ಶ್ರೇಷ್ಠವಾದದ್ದನ್ನು ಕಾಣಲು ಇನ್ನೊಂದು ಕಾರಣವಿತ್ತು. ಇವರೆಲ್ಲ ಯೂರೋಪಿನ ಇಹವಾದಿಗಳ ಜೊತೆ ವಾದದಲ್ಲಿ ಸೋಲಹತ್ತಿದ್ದರು. ಯೂರೋಪಿನ ಗತಿ ಸರಿಯಿಲ್ಲ ಎಂಬ ಸಿಟ್ಟಿಗೆ ಇಲ್ಲಿ ಪರ್ಯಾಯ ಹುಡುಕಿದರು.

ಆ ಬಳಿಕದ ಪ್ರಮುಖ ಇತಿಹಾಸಜ್ಞ ಜೆ. ಎಸ್. ಮಿಲ್. ಆತನ ಬ್ರಿಟಿಷ್ ಭಾರತದ ಇತಿಹಾಸ ಎಂಬ ಗ್ರಂಥದೊಡನೆ ಕೋಮುವಾದೀ ಚಾರಿತ್ರಿಕ ವ್ಯಾಖ್ಯಾನ ಆರಂಭವಾಯಿತು. ಹಿಂದೂ, ಮುಸ್ಲಿಂ ಮತ್ತು ಬ್ರಿಟಿಷ್ (ಕ್ರಿಶ್ಚಿಯನ್ ಅಲ್ಲ!) ಎಂಬ ಕಾಲ ವಿಭಜನೆ ಮಾಡಿದ್ದು ಮಿಲ್. ಈ ವಿಭಾಗ ಇಂದಿಗೂ ಒಪ್ಪಿತವಾಗಿ ಮುಂದವರಿದಿದೆ.

ಮಿಲ್ ತನ್ನ ವ್ಯಾಖ್ಯೆಯಲ್ಲಿ ಹಿಂದೂ ನಾಗರಿಕತೆಯನ್ನು ಕಟುವಾಗಿ ಟೀಕಿಸಿದ್ದ. ರಾಷ್ಟ್ರೀಯತೆಯ ಉಗಮ ಕಾಲದ ಭಾರತೀಯ ಚರಿತ್ರಕಾರರು ರಾಷ್ಟ್ರೀಯ ಆತ್ಮ ಗೌರವದ ಕಾರಣಕ್ಕಾಗಿ ಹಿಂದೂ ನಾಗರಿಕತೆಯನ್ನು ಸಮರ್ಥಿಸಿ, ಹೊಗಳುವುದು ಅನಿವಾರ್ಯವಾಯಿತು. ಈ ವೈಭವ, ಸಮೃದ್ಧಿಗಳ ವರ್ಣ ಚಿತ್ರದಲ್ಲಿ, ಒಳ ಹುಳುಕುಗಳು ಆ ಕಾಲದ ಅಂತಃಕಲಹಗಳು ಸರಿಯಾಗಿ ಮರೆಮಾಚಲ್ಪಟ್ಟವು. ಪಾಶ್ಚಾತ್ಯ ಪ್ರಜಾಸತ್ತೆಯ ಮೌಲ್ಯಗಳನ್ನು ನಮ್ಮದೇ ಇತಿಹಾಸದಲ್ಲಿ ನೋಡುವ ಪ್ರಯತ್ನಗಳು ನಡೆದವು.

ಇವು ಯಾವುವೂ ಮಿಲ್‌ನ ವಿಭಾಗಗಳನ್ನು ಪ್ರಶ್ನಿಸಲಿಲ್ಲ. ರಾಜವಂಶಗಳ ಅಧ್ಯಯನವೇ ಚರಿತ್ರೆಯೆಂದು ಭಾವಿಸಲಾಯಿತು. ತತ್ಪರಿಣಾಮವಾಗಿ ಹಿಂದೂ-ಮುಸ್ಲಿಂ ಭೇದ ಹೆಚ್ಚುತ್ತಾ ಹೋಗಿ ಬಿಗಿಗೊಂಡಿತು. ಚಾರಿತ್ರಿಕವಾಗಿ ಕ್ರಿ. ಶ. ೧೨೦೦ ರ ವರೆಗೆ ಹಿಂದೂ ಕಾಲ ಎಂದು ಕರೆಯಲಾಗುತ್ತಿದೆ. ಇದು ನಿಜವಲ್ಲ. ಯಾಕೆಂದರೆ ಸುಮಾರು ಕ್ರಿ. ಪೂ. ೫೦೦ ರಿಂದ ಕ್ರಿ. ಶ. ೩೦೦ ರ ವರೆಗೆ ಮೌರ್ಯರು, ಕುಶಾನರು, ಶಕರು ಆಳಿದ್ದರು. ಇವರೆಲ್ಲ ಬೌದ್ಧೀಯರು. ಹಾಗಾದರೆ ಬೌದ್ಧೀಯ ಯುಗ ಎಂದು ಏಕೆ ಕರೆಯುವುದಿಲ್ಲ? ಅಷ್ಟೇ ಏಕೆ, ಹಿಂದೂಶಾಹಿ ಕಾಲ ಎಂದು ಕರೆದಾಗಲೂ ಗಮನಿಸಬೇಕಾದ್ದೆಂದರೆ ಭಾರತದ ಎಲ್ಲಾ ಭಾಗದ ಧಾರ್ಮಿಕ ಗುಂಪುಗಳೂ ಏಕೀಭೂತ ಹಿಂದೂ ಧರ್ಮವೆಂದು ಕರೆದುಕೊಂಡಿರಲಿಲ್ಲ. ಹಿಂದೂ ಆಳ್ವಿಕೆ ಶಿಥಿಲವಾಗುತ್ತಿದ್ದ ಕಾಲ ಎಂದು ವ್ಯಥೆ ಪಡುವ ೧೨ – ೧೬ ನೇ ಶತಮಾನದಲ್ಲೇ ಮಾನವತಾವಾದಿ ಭಕ್ತಿ ಪಂಥ ಹುಟ್ಟಿ ಬೆಳೆಯಿತು.

ಹಾಗೇ, ಮುಸ್ಲಿಂ ಆಳ್ವಿಕೆಯ ಕಾಲ ಎಂದಾಗಲೂ ಅಷ್ಟೇ, ಇಡೀ ಭಾರತ ಏಕಾಏಕಿ ಮುಸ್ಲಿಂ ಆಳ್ವಿಕೆಗೆ ಒಳಗಾಯಿತು ಎಂಬ ಭ್ರಮೆ ಇದೆ. ಎಂಟನೇ ಶತಮಾನದಲ್ಲಿ ಅರಬರು ಸಿಂಧ್ ಪ್ರಾಂತ್ಯವನ್ನು ಗೆದ್ದರು. ಆಮೇಲೆ ೧೩ನೇ ಶತಮಾನದಲ್ಲಷ್ಟೇ ಉತ್ತರ ಭಾರತದ ಮೇಲೆ ನಿಯಂತ್ರಣ ಸಾಧ್ಯವಾಯಿತು. ದಕ್ಷಿಣ ಭಾರತದಲ್ಲಂತೂ ನಿಜಾಮ ಶಾಹಿ, ಹೈದರಾಲಿ ಆಡಳಿತ ೧೭–೧೮ನೇ ಶತಮಾನದ ಕೂಸು.

ಐತಿಹಾಸಿಕ ವ್ಯಾಖ್ಯೆಗೂ ಜನರ ಸಂಸ್ಕೃತಿ–ರಾಷ್ಟ್ರೀಯತೆಯ ಕಲ್ಪನೆಗೂ ಗಾಢ ಸಂಬಂಧವಿದೆ. ಪ್ರಾಚೀನ ಭಾರತದ ಬಗ್ಗೆ ಇರುವ ಕೆಲವು ಅಭಿಪ್ರಾಯಗಳು - ಧೋರಣೆಗಳು ಸುಲಭವಾಗಿ ಕೋಮು ದೃಷ್ಟಿಕೋನಕ್ಕೆ ಬಳಕೆಯಾಗುತ್ತವೆ. ಉದಾಹರಣೆಗೆ, ಭಾರತ ಆಧ್ಯಾತ್ಮಿಕತೆ ಬಗ್ಗೆ ಗಾಢ ಹಂಬಲ ಹೊಂದಿತ್ತು ಎಂಬ ನಂಬಿಕೆ. ಈ ನಂಬಿಕೆ ಬೆಳೆದದ್ದು ೧೯ನೇ ಶತಮಾನದಿಂದ ಈಚೆಗೆ. ಈ ಆಧ್ಯಾತ್ಮಿಕ ಹಂಬಲ ಭಾರತದ ಗುತ್ತಿಗೆಯಾಗಿರಲಿಲ್ಲ. ಎಲ್ಲ ಪ್ರಾಚೀನ ಸಂಸ್ಕೃತಿಗಳಲ್ಲೂ ಈ ವಾಂಛೆ ಇತ್ತು. ನಮ್ಮಲ್ಲಿ ಈ ಆಧ್ಯಾತ್ಮಿಕತೆ ಪ್ರಮುಖ ಜೀವನೋದ್ದೇಶವಾಗಿತ್ತು ಎಂಬುದು ಮಿಥ್ಯೆ. ಪುರಾಣ, ಕಾವ್ಯಗಳಲ್ಲಿ, ಐತಿಹಾಸಿಕ ಪುರಾವೆಗಳಲ್ಲಿ ಸಿಗುವ ರಸಿಕತೆ, ಸುಖ

ಗಳ ವಿವರಗಳು ಈ ಪೊಳ್ಳನ್ನು ಬಯಲು ಮಾಡುತ್ತವೆ. ಅಹಿಂಸೆಯ ಕಲ್ಪನೆಯೂ ಅಷ್ಟೇ. ಭಾರತದ ರಾಜರುಗಳಲ್ಲಿ ನಿಜಕ್ಕೂ ಅಹಿಂಸೆಯನ್ನು ಬದುಕಿನ ಭಾಗವಾಗಿಸಿದವನು ಅಶೋಕ ಒಬ್ಬನೇ. ಆದರೆ ಆತ ರಾಷ್ಟ್ರೀಯ 'ಹೀರೋ' ಅಲ್ಲ; ನಮ್ಮ ಮೆಚ್ಚುಗೆ ಪಡೆಯುವವರು ರಾಜೇಂದ್ರ ಚೋಳ, ಇಮ್ಮಡಿ ಪುಲಿಕೇಶಿ, ಸಮುದ್ರಗುಪ್ತ ಮುಂತಾದ ದಂಡಯಾತ್ರೆಯ ಸಾರ್ವಭೌಮರು.

ಚಾರಿತ್ರಿಕ ಘಟನೆಗಳನ್ನು ಕೋಮು ಕನ್ನಡಕದಿಂದಲೇ ನೋಡುತ್ತಿರುವ ಕಾರಣ ವಿನಾಕಾರಣ ವಿಕೃತಿಗಳೇ ಕಾಣಿಸುತ್ತಿರುತ್ತವೆ. ಉದಾಹರಣೆಗೆ ಘಜನಿ ಮಹಮದ್ ದೇವಸ್ಥಾನಗಳನ್ನು ಕೊಳ್ಳೆ ಹೊಡೆದದ್ದನ್ನು ನೋಡುವ ರೀತಿ. ಅತ್ಯ ಮುಸ್ಲಿಂ ಆತನಿಗೆ ಹಿಂದೂಗಳ ಬಗ್ಗೆ ಅಸಹನೆ ಇತ್ತು ಎಂಬುದೇ ಮುಖ್ಯ ಕಾರಣವೆನಿಸಿದೆ. ಎಲ್ಲಾ ರಾಜರೂ ಶತ್ರು ಪ್ರದೇಶವನ್ನು ಗೆದ್ದಾಗ, ಅಲ್ಲಿನ ಸಂಪತ್ತಿನ ಕೇಂದ್ರಗಳನು ದೋಚುತ್ತಿದ್ದರು. ರಾಜ ಬೊಕ್ಕಸ ಬಿಟ್ಟರೆ ದೇವಸ್ಥಾನಗಳಲ್ಲೇ ಸಂಪತ್ತು ಇರುತ್ತಿದ್ದುದು. ಹರ್ಷ ಸಾರ್ವಭೌಮ ದೇವಸ್ಥಾನಗಳನ್ನು ಕೊಳ್ಳೆ ಹೊಡೆಯಲು 'ದೇವೋತ್ಪಾಟನ ನಾಯಕ' ಎಂಬ ಹುದ್ದೆಯ ಅಧಿಕಾರಿಯನ್ನು ನೇಮಿಸಿದ್ದರ ಬಗ್ಗೆ ಕಲ್ಹಣ ತನ್ನ 'ರಾಜತರಂಗಿಣಿ' ಯಲ್ಲಿ ಬರೆಯುತ್ತಾನೆ.

ಕೋಮುವಾದೀ ಚರಿತ್ರೆಯ ವ್ಯಾಖ್ಯೆಗೆ ವೈದಿಕ ಗ್ರಂಥಗಳನ್ನೇ ಆಧಾರವಾಗಿಟ್ಟುಕೊಂಡದ್ದರಿಂದಾಗಿ ಅಶೋಕನ ಬಗ್ಗೆ ಈ ಶತಮಾನದ ಆರಂಭದ ವರೆಗೆ ಗೊತ್ತಿರಲೇ ಇಲ್ಲ. ಹಿಂದೂ ಕರ್ಮಠರ ಅಸಹನೆಯಿಂದಾಗಿ ಚಾರ್ವಾಕ, ಲೋಕಾಯತಗಳೂ ದಾಖಲಿತವಾಗಲಿಲ್ಲ. ಆದ್ದರಿಂದಲೇ ಇಂದು ಚರಿತ್ರೆಯನ್ನು ವ್ಯಾಖ್ಯಾನಿಸುವ ಕ್ರಮ ಬದಲಾಗಬೇಕು. ಈಗ ಇರುವ ಆಧಾರಗಳಷ್ಟೇ ಅಲ್ಲ ಮಾನವಶಾಸ್ತ್ರ, ಪ್ರಾಕ್ತನ ಶಾಸ್ತ್ರಗಳ ಸಾಕ್ಷ್ಯಾಧಾರಗಳ ಮೂಲಕ ಹೊಸ ಚರಿತ್ರೆಯ ಹೊಸ ವ್ಯಾಖ್ಯೆ ಆರಂಭವಾಗಬೇಕು.

ಕೇಳದೇ ಬಿಟ್ಟಿದ್ದ ಪ್ರಶ್ನೆಗಳನ್ನು ಎತ್ತಿಕೊಳ್ಳಬೇಕು. ಉದಾ : ವರ್ಣ ಕ್ರಮವನ್ನು ಮೀರಿ ಕ್ಷತ್ರಿಯೇತರರು ರಾಜರಾಗಿದ್ದರಲ್ಲ, ಆ ಕಾಲದ ಸಾಮಾಜಿಕ ಪರಿಸ್ಥಿತಿ ಹೇಗಿತ್ತು? ಮುಸ್ಲಿಂ ಆಗಮನದ ಮೊದಲು ಹಿಂದೂ ಗುಂಪುಗಳ ನಡುವಿನ ಕಲಹದ ಸ್ವರೂಪವೇನು? ಕೆಲವು ಧರ್ಮಗಳು ಕೆಲವು ಸಮುದಾಯಗಳಲ್ಲಿ ಜನಪ್ರಿಯವಾಗಲು ಕಾರಣವೇನು? ಜಾತಿ ಪದ್ಧತಿಯ ಬಿಗಿ, ಮುಸ್ಲಿಂ ರಾಜರ ಪ್ರಲೋಭನೆ ಹೀಗೆ ಹಲವು ಕಾರಣಗಳಿಂದ ಇಸ್ಲಾಂಗೆ ಎಂದೋ ಮತಾಂತರಗೊಂಡ ನಮ್ಮವರನ್ನೇ ವಿದೇಶೀಯರೆಂದು ಕಾಣಲು ಏನು ಕಾರಣ?

ಹೀಗೆ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಹುಡುಕಬೇಕು. ಚರಿತ್ರೆಯ ವ್ಯಾಖ್ಯೆ ವಸ್ತುನಿಷ್ಠವಾಗುತ್ತಾ ಹೋಗಬೇಕು. ಈ ವ್ಯಾಖ್ಯೆಯೇ ತಲಾಂತರದಲ್ಲಿ ಜನಪ್ರಿಯ

೧೭ ನೇ ಪುಟ ನೋಡಿ

ಇತಿಹಾಸದ ವ್ಯಾಖ್ಯೆ —ಟಿಪ್ಪಣಿ-೨

—ಹರಬನ್ಸ್ ಮುಖಿಯಾ

ನಮ್ಮ ಚರಿತ್ರೆಯನ್ನು ಈಗ ಓದುವಂತೆ ಓದಿದರೆ ೧೧ ನೇ ಶತಮಾನದ ವರೆಗೆ ಹಿಂದೂಗಳೂ, ೧೧ ಅಥವಾ ೧೨ ನೇ ಶತಮಾನದಿಂದ ೧೮ ನೇ ಶತಮಾನದ ವರೆಗೆ ಮುಸ್ಲಿಮರೂ ಈ ದೇಶವನ್ನು ಆಳಿದರು ಎಂಬ ಭ್ರಮೆ ಕುದುರೀತು. ಇಸ್ಲಾಂ ಮತ್ತು ಮುಸಲ್ಮಾನರ ಬಗ್ಗೆ ಇರುವ ಪೂರ್ವಾಗ್ರಹಗಳ ಬೇರು ಅಡಗಿರುವುದು ಈ ಮಧ್ಯಕಾಲದ ಚರಿತ್ರೆಯಲ್ಲಿ. ಈ ಧೋರಣೆಯ ಮುಖ್ಯ ಎರಡು ತಪ್ಪುಗಳೇನೆಂದರೆ.

೧. ರಾಜನೊಬ್ಬನ ಅಥವಾ ಅವನ ಕುಲದ ಇತಿಹಾಸವೆಂದರೆ ದೇಶದ ಇತಿಹಾಸ, ರಾಜನ ವೈಯಕ್ತಿಕ ಧರ್ಮವೇ ನಿರ್ಣಾಯಕ ಅಂಶ ಎಂಬ ಅಭಿಪ್ರಾಯ.

೨. ಇಸ್ಲಾಂ ಬಗ್ಗೆ ಸ್ಥಾಪಿತ ನಿಲುವು; ಕಳೆದ ಸಾವಿರ ವರ್ಷಗಳಲ್ಲಿ ಇಸ್ಲಾಂನಲ್ಲಾದ ಬದಲಾವಣೆ, ಬೆಳವಣಿಗೆಗಳನ್ನು ಇದು ನಿರ್ಲಕ್ಷಿಸುತ್ತದೆ.

ಮಧ್ಯಕಾಲೀನ ಭಾರತದ ಒಂದಷ್ಟು ಗ್ರಂಥಗಳು ಸುಲಭವಾಗಿ ದಕ್ಕಿರುವುದೇ ಆ ಕಾಲದ ಚರಿತ್ರೆಯನ್ನು ಈಗಿರುವಂತೆ ಬರೆಯಲು ಕಾರಣವಾಯಿತು. ಉದಾಹರಣೆಗೆ, ಜಿಯಾ ಉದ್ದೀನ್ ಬರಾನಿಯ 'ತರೀಖ್–ಇ–ಫಿರೂಜ್‌ಶಾಹಿ', ಅಬುಲ್ ಫಜಲ್‌ನ 'ಅಕ್ಬರ್ ನಾಮಾ' ಇತ್ಯಾದಿ ಈ ಗ್ರಂಥಕರ್ತರೆಲ್ಲ ಆಯಾ ರಾಜರ ಆಸ್ಥಾನ ವಂದಿಗರಾಗಿದ್ದರು ಎಂಬುದನ್ನು ಮರೆಯಕೂಡದು. ಸದ್ಯಃಸ್ಥಿತಿಯನ್ನು ಉಳಿಸುವುದು ರಾಜನ ಕರ್ತವ್ಯ ಎಂದು ಆಗ ಭಾವಿಸಲಾಗುತ್ತಿತ್ತು. ಆದ್ದರಿಂದಲೇ ತನ್ನ ಸಿಂಹಾಸನಕ್ಕೆ, ರಾಜ್ಯಕ್ಕೆ ಅಪಾಯವೆನ್ನಿಸಿದ ಎಲ್ಲರನ್ನೂ ತುಳಿಯಲಾಗುತ್ತಿತ್ತು. ಈ ಕೆಲಸವನ್ನು ಎಲ್ಲಾ ಆಸ್ಥಾನ ವಂದಿಗ ಗ್ರಂಥ ಕರ್ತರು ಸ್ವಾಗತಿಸಿ, ಸಮರ್ಥಿಸುತ್ತಿದ್ದರು. ಹೀಗೆ ನಾಮಾವಶೇಷಗೊಂಡವರಲ್ಲಿ ಹಿಂದೂ ರಾಜರು, ಪಾಳೆಯಗಾರರೂ ಇದ್ದರು. ಇದು ಮೂಲತಃ ಆಳುವ ವರ್ಗದ ಇಬ್ಬರ ನಡುವಿನ ಹೋರಾಟವೇ ಹೊರತು ಸಾಮಾಜಿಕ ದಬ್ಬಾಳಿಕೆ ಎಂದು ಭಾವಿಸುವಂತಿಲ್ಲ. ಇನ್ನು ಸಮಾನತೆಯ ಕಲ್ಪನೆಯಿಂದ ಆರಂಭವಾದ ಇಸ್ಲಾಂನಲ್ಲಿ ಆಳುವ ವರ್ಗವೆಂಬುದು

ಇರಲೇ ಇಲ್ಲ. ಸುಲ್ತಾನ್ ಘಜನಿ ಮಹಮ್ಮದನೇ ಮೊದಲ ಸುಲ್ತಾನ್ ಅಥವಾ ದೊರೆ. ಭಾರತದಲ್ಲಿ ಟರ್ಕಿಯರು ಧಾಳಿಮಾಡಿ ಗೆದ್ದಾಗಲೂ ಅವರು ತಮ್ಮ ಸಾಮ್ರಾಜ್ಯದ ಖಾಯ ಮಾತಿಗೆ ನೆಚ್ಚಿಕೊಂಡಿದ್ದು ಸ್ಥಳೀಯ ಹಿಂದೂ ಪಾಳೆಯ ಗಾರರನ್ನೇ. ಮಧ್ಯಮ ಮತ್ತು ಕೆಳಗಿನ ಆಡಳಿತ ಪೂರ್ತಿ ಹಿಂದೂಗಳದೇ ಆಗಿತ್ತು. ಆಳುವ ವರ್ಗದಲ್ಲಿ ಹಿಂದೂಗಳೂ ಸೇರಿದ್ದರು. ಇಂಥಾ – ರಾಜಕೀಯವಾಗಿ ಪ್ರಭಾವಶಾಲೀ ಹಿಂದೂಗಳನ್ನು ಮತಾಂತರಿಸುವ ಪ್ರಯತ್ನ ನಡೆಯಿತಷ್ಟೇ ಹೊರತು, ಸರ್ಕಾರವೇ ಮುಂದಾಗಿ ಸಾಮೂಹಿಕ ಮತಾಂತರಕ್ಕೆ ಯತ್ನಿಸಿದ ಉದಾಹ ರಣೆ ಒಂದೂ ಸಿಗದು. ಶತ್ರುತ್ವ, ಶಿಕ್ಷೆಯ ಭಾಗವಾಗಿ ಮತಾಂತರ ಇದ್ದಿರಬಹುದು. ಮತಾಂತರಗೊಂಡಾಗ ಜೀವ ಭಿಕ್ಷೆ ನೀಡುವ ಸಂಪ್ರದಾಯ ಸಹಜ.

ಮುಸ್ಲಿಂ ದೊರೆಗಳ ಮತಾಂತರದ ಹುಚ್ಚಿನ ಬಗ್ಗೆ ಮಾತಾಡುವವರು ಅದೇ ದೊರೆಗಳ ಆಸ್ಥಾನದಲ್ಲೋ, ಸಾಮ್ರಾಜ್ಯದಲ್ಲೋ ಮುಖ್ಯರಾಗಿ ಉಳಿದಿದ್ದ ಹಿಂದೂ ಗಳ ಬಗ್ಗೆ ಏನನ್ನುತ್ತಾರೆ? ಅವರ‍್ಯಾಕೆ ಮತಾಂತರಗೊಳ್ಳಲಿಲ್ಲ. ಇನ್ನು ಮುಸ್ಲಿಂ ದೊರೆಗಳನ್ನು ಖಂಡಿಸಲು ಜೆಸಿಯಾ (ಹಿಂದೂ ತಲೆಗಂದಾಯ) ವನ್ನು ಉದಾಹರಿ ಸುವುದಿದೆ. ಮುಸ್ಲಿಮರು 'ಜಸತ್' ಎಂಬ ತಲೆಗಂದಾಯ ಕೊಡಬೇಕಾಗಿತ್ತು ಎಂಬುದು ಹೆಚ್ಚಿನವರಿಗೆ ತಿಳಿದಿಲ್ಲ. ಹಿಂದೂ ಜಾಮೊರಿನ್ ದೊರೆ ತನ್ನ ಯಹೂದಿ ಪ್ರಜೆಗಳ ಮೇಲೆ 'ಜೆಸಿಯಾ' ವಿಧಿಸಿದ್ದ. ಈ ತೆರಿಗೆ ಧಾರ್ಮಿಕ ದಬ್ಬಾಳಿಕೆಯ ಪ್ರತೀಕವಲ್ಲ; ಆ ಕಾಲದ ಆರ್ಥಿಕ ನೀತಿಯ ಒಂದು ವಿಧಾನ ಅಷ್ಟೇ.

ಮತಾಂತರದ ಬಗ್ಗೆ ಇನ್ನೊಂದು ಮಾತು – ತನ್ನ ರಾಜ್ಯ ಶಕ್ತಿಯನ್ನು ಬಳಸಿ ಬುದ್ಧ ಧರ್ಮವನ್ನು ಪ್ರಚುರಿಸಿದ ಸಾಮ್ರಾಟ್ ಅಶೋಕನ ಬಗ್ಗೆ ಯಾರೂ ಸಲ್ಲದ ಮಾತಾಡುವುದಿಲ್ಲ! ಆದ್ದರಿಂದಲೇ ರಾಜ/ಸುಲ್ತಾನನೊಬ್ಬ ಮತಾಂತರದ ಪ್ರಯತ್ನ ಮಾಡಿದ್ದಲ್ಲಿ ಆಯಾ ಚಾರಿತ್ರಿಕ ಕಾಲ ಘಟ್ಟದ ಧಾರ್ಮಿಕ ಸ್ಥಿತಿಗತಿಗಳನ್ನು ಅರ್ಥೈಸಿ ಕೊಳ್ಳಲು ಯತ್ನಿಸುವುದು ಒಳ್ಳೆಯದು.

ಮುಸ್ಲಿಂ ದೊರೆಗಳ ರಾಜ್ಯಗಳಲ್ಲೂ ಸುಭೇದಾರರು, ಪಾಳೇಗಾರರು ಹಿಂದೂ ಗಳೇ ಆಗಿದ್ದರು. ಕ್ರಮೇಣ ಕೆಲವು ಮುಸ್ಲಿಂ ಪಾಳೇಗಾರರು ಹುಟ್ಟಿಕೊಂಡರು. ಒಂದಾಯ, ಕಲಹ, ಒಳಜಗಳಗಳು ಹಾಸುಹೊಕ್ಕಾಗಿದ್ದ ಆಗಿನ ಕಾಲದ ರಾಜ ಕೀಯದಲ್ಲಿ ಮತೀಯ ಅಂಶಗಳು ಗೌಣವಾಗಿದ್ದವು. ಹೆಚ್ಚಿನ ಪಾಳೇಗಾರರು ಲೋಲುಪರಾಗಿದ್ದರು. ಬೊಕ್ಕಸದ ತೆರಿಗೆ ಹಣ ಮುಳುಗಿಸುವುದು ಸಾಮಾನ್ಯ ವಾಗಿತ್ತು. ಕಲೆ ಸಾಹಿತ್ಯಕ್ಕೆ ಪ್ರೋತ್ಸಾಹ ಅನ್ನುವುದೂ ಈ ಲೋಲುಪತೆಯ ಭಾಗವೇ ಆಗಿತ್ತು, ಹಿಂದೂ–ಮುಸ್ಲಿಂ ಪಾಳೆಗಾರರಿಗಿದ್ದ ಇನ್ನೊಂದು ಸಾಮಾನ್ಯ ಗುಣಪರಂಪರೆ ಬಡ ಜನತೆಯ ಬಗ್ಗೆ ಇದ್ದ ನಿರ್ಲಕ್ಷ್ಯ.

೧೭ ನೇ ಪುಟ ನೋಡಿ

ನಮ್ಮ 'ನಾಗರಿಕತೆ'ಯ ಕುರಿತು

— ಎಂ. ಜಿ. ಚಂದ್ರಶೇಖರಯ್ಯ

-೧-

ನಮ್ಮದು ಆಧುನಿಕ ನಾಗರಿಕತೆ. ಯಾಂತ್ರಿಕ ನಾಗರಿಕತೆ ಎಂದೆಲ್ಲ ಹೇಳಿಕೊಳ್ಳುತ್ತೇವೆ. ಅದರ ಒಳಾರ್ಥವೆಂದರೆ, ದಿಟವಲ್ಲ ನಮ್ಮದು ವೇಗದ ನಾಗರಿಕತೆ. ಇದರ ಸೆಳೆತಕ್ಕೆ ಸಿಕ್ಕ ಮನುಷ್ಯನ ಬದುಕು ತೀವ್ರತರ ಬದಲಾವಣೆಗೆ ಒಳಗಾಗುತ್ತಲೇ ಇರುತ್ತದೆ. ಈ ಬದಲಾವಣೆಗೆ ಮೂಲತಃ ಮನುಷ್ಯನ ಅಂತರಂಗದ ವಿಕಾಸಕ್ಕೆ ಸಂಬಂಧಿಸಿದ್ದಾಗಿರದೆ, ಅವನು ಹೊಂದಿರುವ ನಾಗರಿಕ ಸೌಲಭ್ಯಗಳು, ಆಧುನಿಕ ತಂತ್ರಜ್ಞಾನದ ಫಲವಾದ ಉಪಕರಣಗಳಿಗೆ ಸಂಬಂಧಿಸಿರುತ್ತವೆ. ವೇಗದ ನಾಗರಿಕತೆಗೆ ಒಂದು ಸಣ್ಣ ನಿದರ್ಶನವಾಗಿ ಆಟೋಮೊಬೈಲ್ ಸಾಧಿಸಿದ ಪ್ರಗತಿ ಆ ಮೂಲಕ ಅವನು ಪಡೆದ ಸಂತೋಷವನ್ನು ಗಮನಿಸಬಹುದು. ವೇಗದ ಚಲನೆ ಆಧುನಿಕ ಬದುಕಿನಲ್ಲಿ ಗೌರವಕ್ಕೆ ಪಾತ್ರವಾಗಿರುವುದು, ಅದನ್ನು ದೊಡ್ಡ ಸಾಧನೆಯೆಂಬಂತೆ ಕೊಂಡಾಡುತ್ತಿರುವುದು ನಿಜವಾಗಿಯೂ ಹೆಮ್ಮೆ ಪಡಬೇಕಾದ ವಿಷಯವೆ? ನಮ್ಮ ಅಡಿಗೆ ಮನೆಗಳನ್ನು ಪ್ರವೇಶಿಸಿರುವ ಯಾಂತ್ರಿಕ ಸಾಧನೋಪಕರಣಗಳಾಗಲಿ, ಮನರಂಜನೆ-ಸಂಪರ್ಕ ಸಾಧನಗಳಾಗಲಿ ಬರಿ ಉಪಕರಣಗಳಾಗಿ ಉಳಿದಿಲ್ಲ. ಬದಲಾಗಿ ನಾಗರಿಕತೆಯ ಮಾನದಂಡಗಳಾಗಿರುವುದು, ವ್ಯಕ್ತಿಯ ಗೌರವ ಘನತೆಯ ಸಾಧನಗಳಾಗಿಬಿಟ್ಟಿರುವುದಂತೂ ವಿಷಾದದ ಸಂಗತಿಯಲ್ಲವೆ? ಅಡಿಗೆಗೆ ಬೇಕಾದ ಸಣ್ಣಪುಟ್ಟ ರುಬ್ಬುವ, ಕುಟ್ಟುವ ಕೆಲಸಗಳು; ಅಂಗಡಿಗೋ, ಮಾರ್ಕೆಟ್ಟಿಗೋ, ಸಿನಿಮಾಕ್ಕೋ ಒಂದು ಕಿ. ಮಿ. ನಡೆಯುವುದು ಯಂತ್ರ ನಾಗರಿಕತೆಯಲ್ಲಿ ತಾತ್ಸಾರಕ್ಕೆ ಒಳಗಾಗುವ ಸ್ಥಿತಿ ಉಂಟಾದುದಾದರೂ ಹೇಗೆ? ಯಾವ ಸಮಾಜದಲ್ಲಿ ಹಣ ಮನುಷ್ಯನಿಗಿಂತ ಮುಖ್ಯ ಅಂತ ಯಾವತ್ತು ನಿರ್ಧಾರವಾಗುತ್ತದೋ, ಆ ಕ್ಷಣದಿಂದಲೇ ಆ ಸಮಾಜ ಅಮಾನವೀಕರಣಗೊಳ್ಳತೊಡಗುತ್ತದೆ. ಹಣ ಒಂದು ಸಮಾಜ ತನ್ನ ಆರ್ಥಿಕ ವ್ಯವಹಾರಗಳಿಗಾಗಿ ಶಾಸನ ಬದ್ಧವಾಗಿ ಸೃಷ್ಟಿಸಿಕೊಂಡ ಒಂದು ಬೆಲೆಯುಳ್ಳ ಸಾಂಕೇತಿಕ ಸಾಧನ ರೂಪಮಾತ್ರ ಆದರೆ, ಆಧುನಿಕ ಬದುಕು ಯಂತ್ರನಾಗರಿಕತೆಯ

ಮೂಲಕ ಕ್ರಮೇಣ ಅಪಮಾನವೀಕರಣಗೊಳ್ಳುತ್ತ, ಉತ್ಪಾದಿತ ವಸ್ತುಗಳನ್ನು ಕೊಳ್ಳುವ ಅಧಿಕ ಸಾಮರ್ಥ್ಯವುಳ್ಳವರನ್ನೇ ಗೌರವಾನ್ವಿತರೆಂಬ ಭ್ರಮೆ ಮೂಡಿಸಿಬಿಟ್ಟದ್ದು ಎಂಥ ವೈಚಿತ್ರ್ಯ ನೋಡಿ! ಅಧಿಕಾಧಿಕ ಉಪಭೋಗಿ ವಸ್ತುಗಳನ್ನು ಕೊಳ್ಳಬಲ್ಲವರೆಲ್ಲ ಒಂದು ವರ್ಗವಾಗಿ ಆ ಒಂದು ಸಣ್ಣ ಗುಂಪೇ ಪ್ರತ್ಯೇಕವಾದ, ಅಸ್ವಾಭಾವಿಕವೂ ಆದ ಜೀವನ ಕ್ರಮವನ್ನು ನಿಜವಾದ ಬದುಕೆಂದು ಮೆರೆಸತೊಡಗಿದೊಡನೆ, ಈ ಕೊಳ್ಳಬಲ್ಲ ಸಾಮರ್ಥ್ಯಕ್ಕಾಗಿ ಹೆಚ್ಚೆಚ್ಚು ಜನರಲ್ಲಿ ಪೈಪೋಟಿ ಉಂಟಾದದ್ದೇ ಮಾನವೀಯ ಮೌಲ್ಯಗಳ ಅವನತಿಗೆ ಆರಂಭವಾಯ್ತು.

ಆಧುನಿಕ ಯಂತ್ರ ನಾಗರಿಕತೆಯ ಲಕ್ಷಣವೆ ಅನುಕರಣೆ; ಅಂದರೆ, ಸ್ವಂತಿಕೆಯನ್ನು ತಿಳಿದೋ ತಿಳಿಯದೆಯೋ ಬಿಟ್ಟುಕೊಡುತ್ತ, ಜಡವಾಗುತ್ತಾ ಹೋಗುವುದು. ಜಡವಾಗುವುದು ಕೇವಲ ಮನುಷ್ಯನ ಕ್ರಿಯೆ–ಯೋಜನಾ ಕ್ರಮಗಳಲ್ಲ, ಮನುಷ್ಯನೇ ಜಡವಾಗುವುದು : ಒಂದು ವಸ್ತುವಾಗುವುದು : ಮಾರಬಲ್ಲ commodity ಯಾಗುತ್ತ ಹೋಗುವುದು, ತಾನು ಮಾಡುವ ಕೆಲಸ, ಆಡುವ ಮಾತು, ಎಲ್ಲವೂ ಕೊಳ್ಳಬಲ್ಲ ಸಾಮರ್ಥ್ಯ ತರುವ ಹಣಕ್ಕಾಗಿ ಮಾತ್ರವಾದಾಗ, ದುಡಿಮೆಯ ಸಂತೋಷ ಇಲ್ಲವಾಯ್ತು. ಅಲ್ಲದೆ ಯಂತ್ರ ನಾಗರಿಕತೆ ಮನುಷ್ಯನಲ್ಲಿರುವ ದುಡಿಮೆಯ ಕುಶಲತೆಯನ್ನೆ ನಾಶಮಾಡಿಬಿಡುವುದರ ಮೂಲಕ ಅವನನ್ನು ಕೇವಲ ಯಾಂತ್ರಿಕ ದುಡಿಮೆಗಾರನನ್ನಾಗಿಸಿಬಿಟ್ಟಿತು.

ವೇಗ ನಾಗರಿಕತೆಯ ಬಹು ಮುಖ್ಯ ದುರಂತ ಮನುಷ್ಯನನ್ನು ದುರಾಸೆಯವನನ್ನಾಗಿಸಿದ್ದು. ಪ್ರಕೃತಿಯನ್ನು ತನಗಾಗಿರುವ ದೊಡ್ಡ ಊಟದ ತಟ್ಟೆಯೆಂದು ಭಾವಿಸಿದ್ದಲ್ಲದೆ ಕಬಳಿಸಿ ಕಬಳಿಸಿ ಉಂಟುಮಾಡಿದ ಪರಿಸರದ ಸಮಸ್ಯೆಗಳೆಲ್ಲ, ವೇಗ ನಾಗರಿಕತೆಯಲ್ಲಿ ನಂಬುಗೆ ಇಟ್ಟ ಮಾನವನ ಪಾಪದ ಕೂಸುಗಳು ಮಾತ್ರ. 'ಶುಭಸ್ಯ ಶೀಘ್ರಂ' ಎಂಬ ಹಳೆಯ ಮಾತೊಂದಿದೆ : ಇಲ್ಲಿ ಗಮನಿಸಬೇಕಾದ್ದೆಂದರೆ, ಶೀಘ್ರವಾಗಿ ಏನನ್ನಾದರೂ ಮಾಡುವುದಲ್ಲ; ಬದಲಾಗಿ ಯಾವುದು ಶುಭವೊ ಅದನ್ನು ಮಾತ್ರ ಶೀಘ್ರವಾಗಿ, ಮರೆಯುವ ಮುನ್ನ, ಆಲಸ್ಯತೋರದೆ ಮಾಡು ಎಂಬುದು. ಆಧುನಿಕರಾದ ನಾವು ಶುಭಾಶುಭದ ವಿವೇಚನೆಯಿಲ್ಲದೆ, ಅಶುಭವನ್ನಾಗಲಿ, ಅಕೃತ್ಯವನ್ನಾಗಲಿ, ಸ್ವಾರ್ಥಪರತೆಯಿಂದ ಎಲ್ಲರಿಗೂ ಗೊತ್ತಾಗದ ಮುನ್ನ ಗೊತ್ತಾಗದಂತೆ ಶೀಘ್ರವಾಗಿ ಮಾಡಿದವರಲ್ಲವೆ? ಇದು ಹೇಗಿದೆ ಎಂದರೆ, ಅರಿಯದ ಮಕ್ಕಳು ಅವಸರವಸರವಾಗಿ ತಿಂಡಿತಿಂದು ಹೊಟ್ಟೆನೋವು ಬರಿಸಿಕೊಂಡು, ನೋವು ಎಂದು ಗೋಳಿಡುವಂತೆ, ಆಧುನಿಕತೆಯ ಹೆಸರಲ್ಲಿ, ಪೈಪೋಟಿಯಲ್ಲಿ ವಿವೇಚನಾರಹಿತನಾದ ಆಧುನಿಕ ಮಾನವನು ಸಂಶೋಧನೆಯ ಹೆಸರಲ್ಲಿ ಸೃಷ್ಟಿಸಿದ್ದು ನಾಗರಿಕ ಸಾಧನ ಸೌಲಭ್ಯಗಳನ್ನೇ ಅಥವಾ ಮನುಷ್ಯನ ದುರಂತದ ಆತ್ಮ ಘಾತುಕವಾದ 'ವಿಷದ ಆಟಂಬಾಂಬ್‌ಗಳನ್ನೆ' – ಯೋಚಿಸಿ!

-೨-

‘ಶ್ರದ್ಧೆಯೇ ನಮ್ಮನ್ನು ಶ್ರದ್ಧಾವಂತರನ್ನಾಗಿ ಮಾಡಿ’ ಎಂಬ ಮಾತೊಂದು ಋಗ್ವೇದದಲ್ಲಿ ಬರುತ್ತದೆ. ಈ ಮಾತು ತುಂಬ ಕುತೂಹಲಕಾರಿಯಾಗಿದೆ; ದೇವರನ್ನಾಗಲೀ, ತನ್ನ ಆತ್ಮವನ್ನಾಗಲೀ ಶ್ರದ್ಧಾವಂತನನ್ನಾಗಿ ಮಾಡುವಂತೆ ಬೇಡುತ್ತಿಲ್ಲ ಇಲ್ಲಿ. ಅದಕ್ಕೆ ಬದಲಾಗಿ ತಾನು ನಂಬುವ ಒಂದು ಮೌಲ್ಯವನ್ನೇ ಬೇಡುವ ಇಲ್ಲಿಯ ಪರಿ ಹೊಸದು. ಒಂದು ಸಂಸ್ಕೃತಿಯ ಬೆಳವಣಿಗೆ ಅದನ್ನು ಕಟ್ಟುವ ಜನರ ಚಿಂತನ ಶಕ್ತಿ, ಕರ್ತೃತ್ವ ಶಕ್ತಿ, ಕ್ರಿಯಾಶಕ್ತಿಯಲ್ಲಿ ಅವರಿಗಿರುವ ಶ್ರದ್ಧೆಯನ್ನು ಅವಲಂಬಿಸಿರುತ್ತದೆ. ಅಶ್ರದ್ಧೆ ಯಾವ ಜನಾಂಗವನ್ನಾಗಲಿ, ಸಮಾಜವನ್ನಾಗಲಿ, ರಾಷ್ಟ್ರವನ್ನಾಗಲಿ ಉದ್ಧರಿಸಲಾರದು. ‘ಶ್ರದ್ಧಾ ಪರಮಾಗಚ್ಛತಿ’ ಎಂಬ ಮಾತು ಮಾತಿಗಾಗಿ ಬಳಸಿಬಳಸಿ ಅದು ತನ್ನ ಅರ್ಥವನ್ನೇ ಕಳೆದುಕೊಂಡು ಬಿಟ್ಟಿದೆ. ಇಲ್ಲಿನ ಮುಖ್ಯ ದೋಷವೆಂದರೆ, ಮಾತು ಮತ್ತು ಕೃತಿಯ ಮಧ್ಯೆ ನಾವು ಉಂಟುಮಾಡಿರುವ ಅಂತರ. ಮಾತಿನಲ್ಲಿ, ಅಂದರೆ, ಭಾಷೆಯಲ್ಲಿ ನಂಬಿಕೆ ಕಳೆದುಕೊಂಡ ಮನುಷ್ಯ ಬರವಣಿಗೆ ಕಂಡುಕೊಂಡ, ಅಂದರೆ, ಮನುಷ್ಯ ತಾನು ಆಡಿದ ಮಾತನ್ನು ಶ್ರದ್ಧಾಪೂರ್ವಕವಾಗಿ ಹೇಳದೆ ಸಮಯಸಾಧಕ ಸಾಧನವನ್ನಾಗಿಸಿಕೊಂಡ. ಮಾದಾರ ಚೆನ್ನಯ್ಯನ ಮಾತಿನಲ್ಲಿ ಹೇಳುವುದಾದರೆ ‘ನುಡಿ ಮೇಲು ನಡೆ ಅಧಮವಾದಲ್ಲಿ ಅದೇ ಬಿಡುಗಡೆಯಿಲ್ಲದ ಹೊಲೆ’ – ಅಂದರೆ, ಹೊಲೆಯನಾದ ಅಶ್ರದ್ಧೆಯು ಮಾತಿನಿಂದ.

ಪ್ರಾಚೀನ ಭಾರತೀಯ ಸಮಾಜ ಕರ್ಮ ಅಥವಾ ಕಾಯಕಕ್ಕೆ ಕೊಟ್ಟ ಮಹತ್ವವನ್ನು ಆಧುನಿಕ ಯಂತ್ರ ನಾಗರಿಕತೆ ನಿರ್ಲಕ್ಷಿಸಿತು. ಅಷ್ಟೇ ಅಲ್ಲ, ಕೆಲಸವೆಂದರೆ ಸಂಬಳ ತರುವ ಕೆಲಸ ಎಂಬ ತಿಳಿವಳಿಕೆ ಆಧುನಿಕ ಜಗತ್ತಿನ ಆತ್ಮನಾಶ ಮಾಡಿತು ಎನಿಸುತ್ತದೆ. ಸಂಬಳವಿಲ್ಲದೆ ಮಾಡುವ ಗೃಹಿಣಿಯರ ಕೆಲಸಕ್ಕೆ ಯಾವ ಸ್ಥಾನವನ್ನು ನಾವು ನೀಡಿದ್ದೇವೆಂಬುದನ್ನು ಒಂದು ಕ್ಷಣ ನೆನೆಯುಕೊಂಡರೆ ಸಾಕು ನಮ್ಮ ಯೋಜನಾಕ್ರಮದ ದೋಷಗಳೆಲ್ಲ ಸ್ಪಷ್ಟವಾಗುತ್ತವೆ. ನಮ್ಮ ಸಮಾಜದ ಯೋಜನಾಕ್ರಮದಲ್ಲಿರುವ ಈ ಪರಿಯ ತಪ್ಪು ತಿಳಿವಳಿಕೆಯಿಂದಾಗಿ ಪರಂಪರಾಗತವಾಗಿ ನೆಚ್ಚಿಕೊಂಡು, ಜೀವನ ಮಾರ್ಗವಾಗಿಸಿಕೊಂಡು ಶ್ರದ್ಧೆಯಿಂದ ಮಾಡುತ್ತ ಬಂದ ಕಸುಬುಗಳೆಲ್ಲವನ್ನು ಬಿಟ್ಟು ಸಂಬಳತರುವ ಸರ್ಕಾರಿ ಹುದ್ದೆಗಳತ್ತ ದಾಪುಗಾಲು ಹಾಕತೊಡಗಿದೆವು. ಇದರ ಭೀಕರ ಪರಿಣಾಮಗಳೆಂದರೆ ಮನುಷ್ಯ ಶ್ರದ್ಧೆಯಿಂದ ರೂಪಿಸಿಕೊಂಡು ಬಂದಿದ್ದ ವೈವಿಧ್ಯಮಯ ಕಸುಬುಗಳೆಲ್ಲ ಮಾಯವಾಗಿ, ಒಂದೇ ನಮೂನೆಯ ಕುಶಲತೆಗೆ ಅಷ್ಟಾಗಿ ಅವಕಾಶವೇ ಇಲ್ಲದ ಕೆಲಸದಿಂದಾಗಿ, ಸಂಬಳಕ್ಕಾಗಿ, ಹಣಕ್ಕಾಗಿ ನಿಗದಿತ ವೇಳೆಯಲ್ಲಿ ದುಡಿಯುವ ಸೌಲಭ್ಯಗಳನ್ನೆಲ್ಲ ಪಡೆದ ಮನುಷ್ಯ ಕ್ರಮೇಣ ಅಶ್ರದ್ಧೆಯವನಾದ ಮತ್ತು ಸಂಬಳತಾರದ ಉದ್ಯೋಗಗಳನ್ನೆಲ್ಲ ಕೀಳಾಗಿ ನೋಡುವ ಪ್ರವೃತ್ತಿ ಬೆಳೆಸಿಕೊಂಡ. ಪರಂಪರಾಗತವಾದ ಕಸುಬುಗಳೆಲ್ಲ ನಾಶವಾಗುತ್ತ,

ಅವರಲ್ಲಿ ಆಕರ್ಷಣೆ, ಶ್ರದ್ಧೆಯಿಲ್ಲದ ಯುವಜನಾಂಗ ಸಂಬಳದ ಕೆಲಸಗಳಿಗಾಗಿ ಹುಡುಕುತ್ತ ಹೊರಟಿದ್ದರ ಕಾರಣ ನಮ್ಮ ಸಮಾಜದ ನೋಟದಲ್ಲಾದ ಬದಲಾವಣೆ: ಸರ್ಕಾರಿ ಸಂಬಳ ತರುವವರಿಗೆ ಹೆಚ್ಚೆಚ್ಚು ಮರ್ಯಾದೆ ಕೊಡುತ್ತ ಹೊರಟ ಸಮಾಜ ತನಗೆ ತೀರ ಅಗತ್ಯವಾದ ಕುಲಕಸುಬುದಾರರನ್ನು ಕೀಳಾಗಿ ಕಾಣತೊಡಗಿದ್ದುದರ ಪರಿಣಾಮವಾಗಿ ಸರ್ಕಾರಿ ಹುದ್ದೆಗಳಿಗೆ ಇನ್ನಿಲ್ಲದ ಬೇಡಿಕೆ ಬಂದು, ಉದ್ಯೋಗಾವಕಾಶಗಳು ಸೃಷ್ಟಿಯಾಗದೆ ಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತ ಹೋಯಿತು. ಇದರಿಂದ ಹುಟ್ಟಿದ ಅತೃಪ್ತಿ, ಭ್ರಷ್ಟತನ ಮುಂತಾದ ರೋಗಗಳು ಇರದು ಗುಪ್ತ ರೋಗಗಳಾಗಿ ಉಳಿದಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ಸಂಬಳದ ನೌಕರಿ ಗಿಟ್ಟಿಸಲು ಹಿಡಿಯುವ ಒಳಮಾರ್ಗಗಳು ದುಡಿಮೆಗಾಗಿಯಲ್ಲ, ಅಧಿಕಾರ, ಸಂಬಳ, ಸ್ಥಾನಮಾನಗಳಿಗಾಗಿ. ಭ್ರಷ್ಟಮಾರ್ಗದಿಂದ ನೌಕರಿ ಪಡೆದ ಮನುಷ್ಯ ಭ್ರಷ್ಟತನದ ಮೊತ್ತವಾಗುತ್ತ ಹೆಚ್ಚೆಚ್ಚು ಹಣಗಳಿಸುವ ಒಳಮಾರ್ಗಗಳನ್ನು ನಿರಂತರವಾಗಿ ಹುಡುಕುವ ಪಾಡುಪಡುತ್ತ ಅಸುಖಿಯಾದನೇ ವಿನಃ ಸುಖಿಯಾಗಲಿಲ್ಲ. ಇವನು ಹಾಳಾಗಲಿ; ಸರ್ಕಾರಿ ನೌಕರನ ಬಂಧುಗಳು ಇಂದು ಅವನಿಂದ ನಿರೀಕ್ಷಿಸುವುದು ಉತ್ತಮ ಕಾರ್ಯಕ್ಷಮತೆ, ದಕ್ಷತೆ, ಕುಶಲತೆಯನ್ನಲ್ಲ; ಅವನು ಏನೇನೋ ಮಾಡಿ ಹೆಚ್ಚೆಚ್ಚು ಹಣ ಮಾಡುವುದನ್ನು. ಕಾಯಕವೇ ಕೈಲಾಸವೆಂದ ಬಸವನ ನಾಡಿನಲ್ಲಿ, ಶ್ರದ್ಧೆಯನ್ನು ನಂಬಿದವರ ನಾಡಿನಲ್ಲಿ ಎಲ್ಲೆಲ್ಲೂ ಕಾಣಬರುವುದು ಅಶ್ರದ್ಧೆ ಮಾತ್ರ. ಈಗ ನಮಗೆಲ್ಲ ಉಳಿದಿರುವುದು ಒಂದೇ ಮಾರ್ಗ: ಶ್ರದ್ಧೆಯೇ ನಮ್ಮನ್ನು ಶ್ರದ್ಧಾವಂತರನ್ನಾಗಿ ಮಾಡು ಎಂದು ಶ್ರದ್ಧೆಯನ್ನೇ ಕೇಳಿಕೊಳ್ಳುವುದು.

[ಕೃಪೆ : 'ಆಕಾಶವಾಣಿ' ಬೆಂಗಳೂರು]

ಇತಿಹಾಸದ ವ್ಯಾಖ್ಯೆ ಟಿಪ್ಪಣಿ–೧ ೧೦ ನೇ ಪುಟದಿಂದ

ಐತಿಹಾಸಿಕ ಕಲ್ಪನೆಯನ್ನು ರೂಢಿಸುತ್ತೆ. ಈಗಿರುವ ಇತಿಹಾಸದ ಜನಪ್ರಿಯ ಕಲ್ಪನೆ ಕೋಮುವಾದಿ ಐತಿಹಾಸಿಕ ವ್ಯಾಖ್ಯೆಯ ಫಲ. ಇದನ್ನು ಕಳೆದ ಐವತ್ತು ವರ್ಷಗಳಿಂದಲೂ ಬದಲಾಯಿಸದೇ, ಬೆಳೆಸಿ ಪಾಠ ಹೇಳಿದ್ದರ ಫಲ - ಇಂದಿನ ಇತಿಹಾಸದ ವಿಕೃತ ಕಲ್ಪನೆಗಳು.

ಇತಿಹಾಸದ ವ್ಯಾಖ್ಯೆ ಟಿಪ್ಪಣಿ–೨ ೧೨ ನೇ ಪುಟದಿಂದ

ಒಂದು ಪುಟ್ಟ ಪ್ರಶ್ನೆಯ ಜೊತೆ ಮುಗಿಸುವೆ. ಮುಸ್ಲಿಮರು ಬದಲಾಗದೇ ಉಳಿಯುತ್ತಾರೆ, ಮೂಲಭೂತವಾದಿಗಳು ಎಂದೆಲ್ಲಾ ಹೇಳುತ್ತಾರೆ. ಎರಡು ಸಾವಿರ ವರ್ಷಗಳ ಹಿಂದೆ ಇದ್ದ ರಜಪೂತ ಕುಟುಬಗಳು – ಸೋಲಂಕಿ, ಚೌಹಾನ್ ಇತ್ಯಾದಿ – ಇನ್ನೂ ಯಾಕೆ ತಮ್ಮ ಬೇರುಗಳನ್ನು ಬಿಟ್ಟುಕೊಟ್ಟಿಲ್ಲ ? ಖಿಲ್ಜಿ, ಲೋಧಿ, ಮುಗಲ್ ಕುಟುಂಬಗಳು ಏನಾದವು ?

ಗ್ರಾಮೋದ್ಯೋಗಗಳು-೧೭

– ಜೆ. ಸಿ ಕುಮಾರಪ್ಪ

(ಜೆ.ಸಿ. ಕುಮಾರಪ್ಪ ಪಾಶ್ಚಿಮಾತ್ಯ ಅರ್ಥಶಾಸ್ತ್ರ ಓದಿ ನಂತರ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದ ಓರ್ವ ವಿಚಾರವಂತ ವ್ಯಕ್ತಿ. ಅವರು ಗಾಂಧೀಜಿಯವರ ವಿಚಾರಗಳಿಗೆ ಮುಖ್ಯವಾಗಿ, ಆರ್ಥಿಕ ವಿಚಾರಗಳಿಗೆ, ಒಂದು ಸ್ವರೂಪ ಕೊಟ್ಟರು. ಅದನ್ನು ಅವರು 'ಶಾಶ್ವತ ಅರ್ಥಶಾಸ್ತ್ರ' ಎಂದು ಕರೆದರು. ಈ ಅರ್ಥಶಾಸ್ತ್ರಕ್ಕೂ ಈಗ ಪ್ರಚಲಿತವಿರುವ ಅರ್ಥಶಾಸ್ತ್ರಕ್ಕೂ ಇರುವ ವ್ಯತ್ಯಾಸ ನಮಗೆ ತಿಳಿದರೆ ಅದರಿಂದ ಬಹಳ ಪ್ರಯೋಜನವುಂಟು. ಅದಕ್ಕಾಗಿ ಆ ಪುಸ್ತಕದ ಭಾಗಗಳನ್ನು ಕ್ರಮಶಃ ಪ್ರಕಟಿಸಲಾಗುತ್ತಿದೆ. ಅನುವಾದ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ.—ಸಂ.)

ವಿವಿಧೋದ್ದೇಶಗಳ ಸಹಕಾರ ಸಂಘಗಳು ಕಚ್ಚಾಮಾಲನ್ನು ಒದಗಿಸಬಹುದು, ಸಿದ್ಧವಾದ ಸಾಮಾನನ್ನು ಶೇಖರಿಸಬಹುದು, ಗ್ರಾಮೋದ್ಯೋಗಗಳಿಂದ ಉತ್ಪತ್ತಿಯಾದ ಪದಾರ್ಥಗಳನ್ನು – ಮುಖ್ಯವಾಗಿ ಆಹಾರ, ವಸ್ತ್ರ, ಇತರ ಪ್ರಾಥಮಿಕ ಅವಶ್ಯಕತೆಗಳಿಗೆ ಸಂಬಂಧಿಸಿದವುಗಳನ್ನು ಜನರಿಗೆ ಒದಗಿಸಿ ಹಂಚುವುದರಲ್ಲಿ ನೆರವಾಗಬಹುದು. ಹಳ್ಳಿಯವರ ಹಿತವನ್ನು ಸದಾ ಗಮನಿಸುತ್ತಲೇ ಇರಬೇಕು. ಮುಖ್ಯವಾಗಿ ಮುಂದೆ ಹೇಳುವ ಮಾತನ್ನು ಗಮನಿಸಬೇಕು:

೧. **ಭತ್ತ** : ೧. ಭತ್ತದ ಗಿರಣಿಗಳನ್ನು ನಿಲ್ಲಿಸಿ ಆ ಇಂಜಿನುಗಳನ್ನು ನೀರಾವರಿ ಕೆಲಸಕ್ಕೆ ಉಪಯೋಗಿಸಬೇಕು.

೨. ಭತ್ತವನ್ನು ತೊಳೆಸುವ ಹಲ್ಲರ್ ಯಂತ್ರಗಳನ್ನು ನಿಷೇಧಿಸಬೇಕು.

೩. ಗಿರಣಿಯಲ್ಲಿ ತೊಳೆಸುವ ಅಕ್ಕಿಯಲ್ಲಿರುವ ಸತ್ವದ ವಿಷಯವನ್ನು ಜನರಿಗೆ ತಿಳಿಸಬೇಕು. ಆ ಅಕ್ಕಿಯನ್ನು ಅಡಿಗೆ ಮಾಡುವ ವಿಧಾನವನ್ನು ಪ್ರತ್ಯಕ್ಷವಾಗಿ ತೋರಿಸಬೇಕು. ಅಕ್ಕಿಯನ್ನು ಪಾಲಿಷು ಮಾಡುವುದನ್ನು ನಿಲ್ಲಿಸಬೇಕು. ಅಥವಾ ಇಷ್ಟಕ್ಕಿಂತ ಹೆಚ್ಚು ಪಾಲಿಷು ಮಾಡಬಾರದೆಂದು ಕಟ್ಟುಮಾಡಬೇಕು. ಭತ್ತವನ್ನು ಕುಸುಬಲಕ್ಕಿಯಾಗಿ ಮಾಡುವಂತೆ ಪ್ರೋತ್ಸಾಹಿಸಬೇಕು.

೪. ಪ್ರಧಾನವಾಗಿ ಭತ್ತವನ್ನೇ ಬೆಳೆವ ಗದ್ದೆಯ ಸೀಮೆಯಲ್ಲಿ ವ್ಯಾಪಾರದ ಉದ್ದೇಶ್ಯದಿಂದ ಭತ್ತ ಕುಟ್ಟುವುದನ್ನೇ ಒಂದು ದೊಡ್ಡ ಉದ್ಯೋಗವಾಗಿ ಮಾಡಿದ

ಕಡೆ ಬೇರೆ ಬೇರೆ ಯಂತ್ರೋಪಕರಣಗಳನ್ನು ಸಹಕಾರ ಸಂಘದ ಮೂಲಕ ಕೆಲಸಗಾರ ರಿಗೆ ಬಾಡಿಗೆಯ ಮೇಲೆ ಒದಗಿಸಬೇಕು.

೫. ಪಾಲಿಷ್ ಮಾಡಿದ ಅಕ್ಕಿಯನ್ನು ಬಳಸಿ ಎಂದು ಪ್ರಚಾರ ಮಾಡಿದರೆ ಅಕ್ಕಿಯ ಬದಲು ಭತ್ತವನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸಬೇಕಾಗುತ್ತದೆ. ಆಗ ಅದನ್ನು ಸಾಗಿಸುವ ವೆಚ್ಚ ಹೆಚ್ಚಾಗಿ, ಅಕ್ಕಿಯ ಬೆಲೆ ಏರಿದಂತೆ ಸಾಗಣೆಯ ಬಾಡಿಗೆ ಯನ್ನು ವ್ಯವಸ್ಥೆ ಮಾಡಬೇಕು.

೬. ಭತ್ತ ಸುಲಿಯುವುದು, ಅಕ್ಕಿ ತೊಳೆಸುವುದು ಎರಡನ್ನೂ ಸಾಧಿಸುವ ಭತ್ತದ ಕುಟ್ಟುವಿಕೆಯನ್ನು ನಿಲ್ಲಿಸಲು, ಆಯಾ ಸ್ಥಳಗಳಲ್ಲಿ ಭತ್ತ ಸುಲಿಯುವ ಕಲ್ಲು ಗಳನ್ನು ಪ್ರಚಾರಕ್ಕೆ ತರಬೇಕು. ಜಿಲ್ಲಾ ಪ್ರದರ್ಶನ ಕೇಂದ್ರಗಳ ಮೂಲಕ ಆ ಉಪಕರಣಗಳನ್ನು ಒದಗಿಸಬೇಕು. ಅಕ್ಕಿಯನ್ನು ಬೆಳ್ಳಗೆ ತೊಳೆಸುವ ಯಂತ್ರ ಉಪಕರಣಗಳ ಮೇಲೆ ತೆರಿಗೆ ಹಾಕಿ ಅಕ್ಕಿಯನ್ನು ಪಾಲಿಷ್ ಮಾಡುವ ಪದ್ಧತಿಯನ್ನು ತಪ್ಪಿಸಬೇಕು. ಈ ಉಪಕರಣಗಳಿಂದ ಇಷ್ಟೇ ಮಟ್ಟಿಗೆ ಪಾಲಿಷ್ ಮಾಡಬಹುದೆಂದು ನಿಯಂತ್ರಣ ಮಾಡಬೇಕು.

ಹಳ್ಳಿಗೆ ಅಗತ್ಯವಾದ ಭತ್ತ, ಬೇರೆ ದವಸ ಬೀಜದ ದವಸಗಳನ್ನು ಶೇಖರಿಸಿಡ ಬೇಕು. ಹೆಚ್ಚಾದುದನ್ನು ಸಹಕಾರ ಸಂಘದ ಮೂಲಕ ಹೊರಗೆ ಕಳಿಸಬಹುದು.

೨. **ಹಿಟ್ಟು ಬೀಸುವುದು :** ೧. ಜಿಲ್ಲಾ ಪ್ರದರ್ಶನ ಕೇಂದ್ರಗಳ ಮೂಲಕ ಒಳ್ಳೆಯ ಬೀಸುವ ಕಲ್ಲುಗಳನ್ನೂ, ಎತ್ತನ್ನು ಕಟ್ಟಿ ತಿರುಗಿಸುವ, ನೀರಿನಿಂದ ನಡೆಸುವ ಬೀಸುವ ಕಲ್ಲುಗಳಿಗೆ ಬೇಕಾದ ಸಾಮಗ್ರಿಯೆಲ್ಲವನ್ನೂ ಒದಗಿಸಬೇಕು.

೨. ಬಿಳೀ ಮೈದಾಹಿಟ್ಟನ್ನು ಬೀಸದ ಹಾಗೆ ನಿಷೇಧಿಸಬೇಕು.

೩. ಹಿಟ್ಟಿನ ಗಿರಣಿಗಳು ಮೂಟೆಮೂಟೆ ದವಸವನ್ನು ಹಿಟ್ಟು ಮಾಡಿ ಬಹಳ ದಿನ ತಮ್ಮಲ್ಲಿಯೆ ಸಂಗ್ರಹಿಸಿ ಇಟ್ಟುಕೊಳ್ಳುತ್ತವೆ. ಇದರಿಂದ ಆ ಹಿಟ್ಟಿನಲ್ಲಿ ಸಾರವೆಲ್ಲ ನಾಶವಾಗುತ್ತದೆ, ಹಿಟ್ಟು ಕೆಡುತ್ತದೆ. ಆದುದರಿಂದ ಅಂಥ ಗಿರಣಿಗಳನ್ನು ಪ್ರೋತ್ಸಾಹಿಸಬಾರದು.

೪. ಎಲ್ಲಿ ಅನುಕೂಲಗಳಿವೆಯೋ ಅಲ್ಲಿ ಎತ್ತು ಕಟ್ಟಿ ಹಿಟ್ಟು ಬೀಸುವ ವ್ಯವಸ್ಥೆ ಮಾಡಬೇಕು.

೫. ನದಿ, ಕಾಲುವೆ ಹರಿಯುವ ಕಡೆ ಅದರಿಂದ ಜಲಶಕ್ತಿ ಸಿಗುವಂತಿದ್ದರೆ, ಅದನ್ನು ಉಪಯೋಗಿಸಿ ಹಿಟ್ಟು ಬೀಸುವ ದೊಡ್ಡ ಕಲ್ಲುಗಳನ್ನು ಏರ್ಪಾಟು ಮಾಡ ಬೇಕು.

೬. ಪಂಜಾಬಿನಲ್ಲಿ ಇಂಥ ದೊಡ್ಡ ಕಲ್ಲುಗಳನ್ನು ಊರೊಟ್ಟಿನಲ್ಲಿ ಇಟ್ಟು ಕೊಂಡಿದಾರೆ. ಉಳಿದ ಕಡೆಯಲ್ಲಿಯೂ ಹಾಗೆಯೆ ಮಾಡಬಹುದು.

೩. **ಎಣ್ಣೆಯ ಗಾಣ :** ಹಳ್ಳಿಯ ಎಣ್ಣೆಗಾಣಗಳನ್ನು ಪುನರುಜ್ಜೀವನಗೊಳಿಸುವುದರಲ್ಲಿ ಇರುವ ಅಡಚಣೆಗಳು ಮುಖ್ಯವಾಗಿ ಇವು:

ಸುಗ್ಗಿಯಲ್ಲಿಯೇ ಹಳ್ಳಿಯಲ್ಲಿ ಬೆಳೆದ ಎಣ್ಣೆಯ ಬೀಜವೆಲ್ಲ ನಿಶ್ಶೇಷವಾಗಿ ಹೊರಗೆ ಸಾಗಿಹೋಗುತ್ತದೆ. ಊರಿನ ಗಾಣಗಳಿಗೆ ಸಾಕಾಗಿ ಉಳಿದ ಎಣ್ಣೆಯ ಬೀಜ ಮಾತ್ರವೇ ಊರಿನಿಂದ ಹೊರಗೆ ಹೋಗುವಂತೆ ಮೊಟ್ಟಮೊದಲು ವ್ಯವಸ್ಥೆ ಮಾಡಬೇಕು.

ಹಲವು ಕಡೆ ಹಳ್ಳಿಯ ಗಾಣಗಳು ಬಹಳ ಚಿಕ್ಕವು. ಸರಿಯಾದ ಪ್ರಮಾಣದಲ್ಲಿ ಎಣ್ಣೆಕೊಡುತ್ತಿಲ್ಲ. ಅವನ್ನು ನಡೆಸಿ ಬದುಕು ನಡೆಸುವ ಹಾಗಿಲ್ಲ. ಒಂದೊಂದು ಪ್ರಾಂತದಲ್ಲಿಯೂ ಹಲವಾರು ಬಗೆಯ ಗಾಣಗಳಿವೆ. ಇವೆಲ್ಲ ಗಾಣಗಳನ್ನು ವಿಶದವಾಗಿ ಪರಿಶೀಲಿಸಬೇಕು. ಸುಧಾರಿತವಾದ ಹೊಸ ಗಾಣಗಳ ವಿಶೇಷ ಗುಣಗಳನ್ನೂ ಅದನ್ನು ನಡೆಸುವ ರೀತಿಯನ್ನೂ ಪ್ರದರ್ಶಿಸಬೇಕು.

ಹಳೆಯ ರೀತಿಯ ಗಾಣಗಳನ್ನು ಮಾಡುವ ಬಡಗಿಗಳೂ ಸಹ ಈಗ ಹೆಚ್ಚಾಗಿಲ್ಲ. ಅನೇಕ ವೇಳೆ ಗಾಣಿಗರಿಗೆ ಸಕಾಲಕ್ಕೆ ಬಡಗಿಗಳ ನೆರವು ಸಿಗದು. ಗಾಣದ ಚಿಲ್ಲರೆ ಭಾಗಗಳಾಗಲಿ ತತ್ಸಂಬಂಧವಾದ ಸಾಮಗ್ರಿಯಾಗಲಿ ಸಿಗುವುದು ಬಹಳ ಕಷ್ಟ. ಆದುದರಿಂದ ಗಾಣವಾಡುವವರಿಗೂ ಬಡಗಿಗಳಿಗೂ ಈ ಸುಧಾರಿಸಿದ ಗಾಣಗಳ ಬಗ್ಗೆ ಶಿಕ್ಷಣಕೊಡಬೇಕು. ಆ ಶಿಕ್ಷಣಕೇಂದ್ರಗಳಲ್ಲಿ ಗಾಣದ ಭಾಗಗಳೂ ಚಿಲ್ಲರೆ ಮುಟ್ಟೂ ಸಿಗುವಂತಿರಬೇಕು.

೪. **ಬೆಲ್ಲದ ಕೈಗಾರಿಕೆ :** ಬಂಗಾಳದಲ್ಲಿ ಮದರಾಸಿನಲ್ಲಿ ತಾಳೆ ಬೆಲ್ಲವನ್ನು ಮಾಡುವ ಕೈಗಾರಿಕೆ ಸ್ಥಿರಗೊಂಡಿದೆ. ಒಂದು ವ್ಯಾಪಾರವಾಗಿಯೆ ನಡೆಯುತ್ತಿದೆ.

ತಾಳೆಗಿಡಗಳ ಸಂರಕ್ಷಣೆ, ವೃದ್ಧಿ : ತಾಳೆ ಗಿಡಗಳನ್ನು ಕಡಿಯುವುದನ್ನು ತಡೆಯಬೇಕು. ಸಾಗುವಳಿಗೆ ಯೋಗ್ಯವಲ್ಲದ ಸರಕಾರಿ ಭೂಮಿಯನ್ನು ತಾಳೆ – ವನಗಳನ್ನು ಬೆಳೆಸಲು ಉಪಯೋಗಿಸಬೇಕು. ಕ್ರಮೇಣ ಕಬ್ಬಿನ ಬೆಲ್ಲದ ಬದಲು ತಾಳೆಯ ಬೆಲ್ಲವನ್ನೇ ಬಳಕೆಗೆ ತರಬೇಕು. ಖಾಸಗಿ ಹೊಲಗಳಲ್ಲಿಯೂ ಹೊಲದ ಬದುಗಳಲ್ಲಿಯೂ ತಾಳೆಗಿಡಗಳನ್ನು ಬೆಳೆಯುವಂತೆ ಪ್ರೋತ್ಸಾಹಿಸಬೇಕು. ಸರಿಯಾದ ಬೀಜಗಳನ್ನು ಒದಗಿಸಿ, ಯೋಗ್ಯ ಕೃಷಿ ವಿಧಾನವನ್ನು ತಿಳಿಸಬೇಕು.

ಸಹಕಾರ ಸಂಘಗಳು ಈ ಉತ್ಪಾದನೆ, ವ್ಯಾಪಾರಗಳನ್ನು ಕೈಗೆತೆಗೆದುಕೊಳ್ಳಬೇಕು. ಅಗತ್ಯವಿದ್ದಲ್ಲೆಲ್ಲ ಬೆಲ್ಲಮಾಡುವ ಕಡಾಯಿಕೊಪ್ಪರಿಗೆ ಮುಂತಾದ ಸಾಮಗ್ರಿಗಳನ್ನು ಒದಗಿಸಬೇಕು.

೫. **ಜೇನು ಸಾಕಣೆ :** ಜೇನು ಸಾಕುವುದು ಎರಡು ಬಗೆಯಲ್ಲಿ ಲಾಭಕರ. ಅದರಿಂದ ಪೈರು ಹೆಚ್ಚು ಹುಲುಸಾಗಿ, ರೈತರಿಗೆ ಹೆಚ್ಚು ಬೆಳೆ ಸಿಗುತ್ತದೆ. ಜೊತೆಗೆ

ಪುಷ್ಟಿಕರ ಆಹಾರವಾದ ಜೇನುತುಪ್ಪವೂ ಸಿಗುತ್ತದೆ.

ಪ್ರದರ್ಶನ ಕೇಂದ್ರಗಳಲ್ಲಿ ಒಂದೆರಡು ಪೆಟ್ಟಿಗೆ ಇಟ್ಟು ಜೇನು ಸಾಕಣೆ ನಡೆಸಬೇಕು. ಆಮೇಲೆ ಜೇನು ಸಾಕಣೆಗೆ ಯೋಗ್ಯವಾದ ಬನಸಿರಿ ಇರುವಲ್ಲೆಲ್ಲ ಅದನ್ನು ಪ್ರಾರಂಭಿಸಬಹುದು. ಇದಕ್ಕಾಗಿ ಜೇನು ಸಾಕಣೆಯ ವಿದ್ಯೆಯನ್ನು ಬಲ್ಲವರೊಬ್ಬರಿಂದ ಮೊದಲು ಆ ಕ್ಷೇತ್ರ ಪರಿಶೀಲನೆಮಾಡಿಸಬೇಕು. ಜೇನುನೊಣಗಳನ್ನು ಸ್ವಲ್ಪ ಪಳಗಿಸಿ ಬಿಟ್ಟರೆ – ಆ ಕೇಂದ್ರದಲ್ಲಿ ಹಳ್ಳಿಯವರಿಗೆ ಶಿಕ್ಷಣಕೊಟ್ಟು ಅವರಿಗೆ ಸುಲಭ ಧಾರಣೆಗೆ ಸಲಕರಣೆಗಳನ್ನು ಒದಗಿಸಬಹುದು.

೬. ಹತ್ತಿ-ಉಣ್ಣೆ : ಹತ್ತಿ ಬೆಳೆಯುವ ಪ್ರದೇಶದಲ್ಲಿ ಕನಿಷ್ಠ ಪಕ್ಷ ತಲಾ ೧೨ ವರೆ ಎಕರೆ ಆಗುವಷ್ಟು ನೆಲವನ್ನು ಆಯಾ ಸ್ಥಳದ ಜನ ಸಂಖ್ಯೆಗನುಗುಣವಾಗಿ ಬಿಡಬೇಕು. ಅಖಿಲ ಭಾರತ ಚರಖಾ ಸಂಘದ ನಿಯಮದಂತೆ ನೂಲುವಿಕೆ – ನೇಕಾರಿಕೆಯನ್ನು ಕಲಿಸಬೇಕು.

ಇದೇ ರೀತಿ ಕುರಿ ಸಾಕುವ ಸ್ಥಳಗಳಲ್ಲಿ, ಕುರಿ – ಸಾಕಣೆ, ಉಣ್ಣೆ ಶೋಧನೆ ಮುಂತಾದವುಗಳಿಗೆ ನೆರವನ್ನು ನೀಡಿ ಉಣ್ಣೆ ಬಟ್ಟೆಗಳ ಉತ್ಪತ್ತಿಯನ್ನು ವೃದ್ಧಿಗೊಳಿಸಬೇಕು.

೭. ಚರ್ಮ ಹದಮಾಡುವಿಕೆ : ದೇಶದಿಂದ ಹೊರಕ್ಕೆ ತೊಗಲು ಚರ್ಮಗಳನ್ನು ರಫ್ತು ಮಾಡುವುದರಲ್ಲಿ ಜಗತ್ತಿನಲ್ಲೆಲ್ಲ ಭಾರತವೇ ಮೊದಲನೆಯದು. ಈ ಪದಾರ್ಥವನ್ನೆಲ್ಲಾ ನಾವೇ ಹದಮಾಡಿದರೆ ಲಕ್ಷಗಟ್ಟಲೆ ಹರಿಜನರಿಗೆ ಅದರಿಂದ ಜೀವನೋಪಾಯ ಸಿಗುತ್ತದೆ. ಇದರಲ್ಲಿ ಹದಮಾಡುವ ಕೌಶಲವೇ ಮುಖ್ಯ. ಇದಕ್ಕೆ ಹೇರಳವಾಗಿ ಹಣಬೇಕು. ಆದುದರಿಂದ ಈ ಕೆಲಸ ಸಹಕಾರ ಪದ್ಧತಿಯಿಂದ ನಡೆದರೆ ಉತ್ತಮ. ಸಂಘಗಳು ಸತ್ತ ಪ್ರಾಣಿಗಳ ಚರ್ಮವನ್ನು ಕೊಂಡು, ಉಳಿದ ಎಲ್ಲಾ ಕೆಲಸಗಳಿಗೂ ಕೂಲಿಕೊಟ್ಟು, ಆ ಪದಾರ್ಥಗಳನ್ನು ಪೇಟೆಯಲ್ಲಿ ಮಾಡಬೇಕು.

೧. ಎಲ್ಲಾ ಪ್ರಾಂತಗಳಲ್ಲಿಯೂ ಚರ್ಮವನ್ನು ಹದಮಾಡುತ್ತಾರೆ. ಈ ಕೆಲಸ ಎಲ್ಲಾ ಕಡೆಯಲ್ಲಿಯೂ ಒಂದೇ ಮಟ್ಟದಲ್ಲಿಲ್ಲ. ಕಲ್ಕತ್ತೆಯ "ಕ್ರೋಮ್" ಮದರಾಸಿನ 'ಗಾವಿ' ಗಳು ಉತ್ತಮವಾಗಿವೆ. ಅವನ್ನು ಎಲ್ಲಾ ಕಡೆ ಮಾಡರು. ಉಳಿದ ಮಾದರಿಗಳು ಇವೆರಡಕ್ಕಿಂತ ಕೆಳಮಟ್ಟದವು. ಇದಕ್ಕೆ ಕಾರಣವನ್ನು ತಿಳಿದುಕೊಂಡು ಎಲ್ಲಾ ಕಡೆಯೂ ಒಂದೇ ರೀತಿಯ ಹದವನ್ನು ತರಬೇಕು.

೨. ಹದಮಾಡದ ಚರ್ಮ, ತೊಗಲುಗಳನ್ನು ರಫ್ತು ಮಾಡದಂತೆ ಅವರ ಮೇಲೆ ಹೆಚ್ಚಿನ ಸುಂಕ ಹಾಕಿ ಹಾಕಿ ನಿಲ್ಲಿಸಬೇಕು.

೩. ಸತ್ತ ಪ್ರಾಣಿಗಳನ್ನು ಸಾಗಿಸಲು ಒಂದೊಂದು ಗುಂಪು ಕೆಲಸಗಾರರಿಗೆ ಒಂದು ಗಾಡಿಯನ್ನು ಸಹಕಾರ ಸಂಘಗಳು ಒದಗಿಸಬೇಕು. ಈಗ ಈ ಸೌಕರ್ಯವಿಲ್ಲದೆ

ಸತ್ತ ಪ್ರಾಣಿಯನ್ನು ನೆಲದ ಮೇಲೆ ಎಳೆಯುತ್ತಾರೆ. ಇದರಿಂದ ಚರ್ಮದ ಬೆಲೆ ರೂಪಾಯಿಗೆ ಎಂಟಾಣೆ ಕಡಮೆಯಾಗುತ್ತದೆ ಎಂದು ಅಂದಾಜು ಮಾಡಿದಾರೆ.

೪. ಈಗ ಈ ಕೈಗಾರಿಕೆ ನಡೆಯುತ್ತಿರುವ ಸನ್ನಿವೇಶ ತೀರಾ ಅನಾರೋಗ್ಯ ಕರ. ಕೂಡಲೇ ಅದನ್ನು ಸರಿಪಡಿಸಬೇಕು. ಹಳ್ಳಿಯ ವಸತಿಗೆ ಸ್ವಲ್ಪ ದೂರವಾಗಿ ಒಂದು ಸ್ಥಳದಲ್ಲಿ ಸರಿಯಾದ ಗುಡಿಸಲುಗಳು, ಗುಂಡಿಗಳು, ನೀರು ಹರಿಯಲು ಕಾಲುವೆಗಳು, ನೀರಿನ ಸರಬರಾಜು ಮುಂತಾದ ಏರ್ಪಾಟು ಮಾಡಿ ಕೆಲವು ಅಶಾಸ್ತ್ರೀಯ ಪದ್ಧತಿಗಳನ್ನು ಬದಲಿಸಲಿ ಚಿಕ್ಕ ಪುಟ್ಟ ಯಂತ್ರ-ಸಲಕರಣೆಗಳನ್ನು ಬಳಸಿದರೆ ಇದು ಸಾಧ್ಯ. ಹಳ್ಳಿಗೊಬ್ಬರಂತೆ ಇಬ್ಬರಂತೆ ಚದರಿ ಹೋಗಿರುವ ಚಮ್ಮಾರರನ್ನು ಈ ಕೈಗಾರಿಕೆಗಾಗಿ ಒಂದೊಂದು ಹೋಬಳಿಯಲ್ಲೂ ಒಂದೇ ಕಡೆ ಒಂದು ಚರ್ಮಾಲಯದ ಸುತ್ತಲೂ ಸೇರಿಸಬೇಕಾದರೆ, ಅದೂ ಒಳಿತೆ. ಅಂಥ ಚರ್ಮಾಲಯ ಗಳನ್ನು ಸಹಕಾರ ಸಂಘಗಳು ಸ್ಥಾಪಿಸಿ ನಡೆಸಬಹುದು. ಆ ಸಂಘಗಳಲ್ಲಿ ಚಮ್ಮಾರರು ಮಾತ್ರವೇ ಸದಸ್ಯರಾಗಿರಬೇಕು.

೫. ಈಗ ಒಂದೆರಡು ಸ್ಥಳಗಳಲ್ಲಿ ಮಾತ್ರ ಚರ್ಮದ ಪದಾರ್ಥ ಬಹಳ ದೊಡ್ಡ ಪ್ರಮಾಣದಲ್ಲಿ ತಯಾರಾಗುತ್ತಿದೆ. ಅಲ್ಲಿಂದ ಅವನ್ನು ಇಡೀ ದೇಶದ ಮೂಲೆಮೂಲೆಗೂ ಸರಬರಾಜು ಮಾಡುತ್ತಾರೆ. ಈ ವ್ಯವಸ್ಥೆಯನ್ನು ತಪ್ಪಿಸಿ ಆಯಾ ಸ್ಥಳದಲ್ಲಿಯೇ ಸಾಮಾನ್ಯವಾಗಿ ಚರ್ಮದ ಎಲ್ಲಾ ಪದಾರ್ಥಗಳನ್ನೂ ಉದಾ : ಎಕ್ಕಡ, ಹಣದ ಚೀಲ, ಕೈಪೆಟ್ಟಿಗೆ, ನಡುಕಟ್ಟು ಇತ್ಯಾದಿ ಮಾಡುವಂತೆ ಪ್ರಯತ್ನಿಸಬೇಕು. ಸ್ಥಳೀಯ ಪದಾರ್ಥಗಳಿಗೆ ದ್ರವ್ಯ ಸಹಾಯವನ್ನಾದರೂ ಕೊಡ ಬಹುದು; ಹೊರಗಿನಿಂದ ತರಿಸುವ ಪದಾರ್ಥಗಳಿಗೆ ಸುಂಕವನ್ನಾದರೂ ಹಾಕಬಹುದು.

ಸತ್ತ ಪ್ರಾಣಿಗಳ ಮಾಂಸ ರಕ್ತ ಮೂಳೆಗಳಿಂದ ಗೊಬ್ಬರ ಮಾಡಲು ಖಾಸಗಿ ಗುತ್ತಿಗೆದಾರರಿಗಾಗಲಿ ಸಹಕಾರ ಸಂಘಗಳಿಗಾಗಲಿ ಸಹಾಯ ಧನ ಕೊಡಬೇಕು. ಎಷ್ಟು ಗೊಬ್ಬರ ಮಾಡಿದರೆ ಅಷ್ಟು ಪ್ರಮಾಣದಲ್ಲಿ ಸಹಾಯ.

೬. ಗೋಂದು, ನರಗಳು, ಬ್ರಷ್ಷು ಮುಂತಾದ ಇತರ ಪದಾರ್ಥಗಳನ್ನೂ ಈ ಸಂಘಗಳು ತಯಾರು ಮಾಡಬಹುದು. ಚಮ್ಮಾರರ ಮನೆಗಳಲ್ಲಿ ಕೊಂಬಿನ ಕೈಗಾರಿಕೆಯನ್ನು ಪ್ರವೇಶ ಮಾಡಿಸಿ ಲಾಭದಾಯಕವಾಗಿ ಮಾಡಬಹುದು. ಕೆಲವು ಕಾಲ ಆ ಕೈಗಾರಿಕೆಗೆ ಸರಕಾರ ಸಹಾಯ ನೀಡಿ, ತಯಾರಾದ ಪದಾರ್ಥಗಳನ್ನು ಕೊಳ್ಳಬೇಕು. ಕೈಗಾರಿಕೆಗೆ ಬೇಕಾದ ಉಪಕರಣಗಳನ್ನು ಬಾಡಿಗೆಗೆ ಅಥವಾ ಕಂತು ಗಳಲ್ಲಿ ಒದಗಿಸಬೇಕು.

೮. **ಸಾಬೂನು ಮಾಡುವುದು** : ಸಾಬೂನಿನ ರಚನೆಗೆ ತಕ್ಕ ಮಣ್ಣಿನ ಪರಿ ಶೀಲನೆ ನಡೆಯಬೇಕು. ಎಲ್ಲೆಲ್ಲಿ ಆ ಮಣ್ಣು ಇದೆಯೋ ಗೊತ್ತಾಗಬೇಕು. ಅದನ್ನು

ಸಾಬೂನು ಮಾಡುವವರು ಉಚಿತವಾಗಿ ಉಪಯೋಗಿಸಲು ಅವಕಾಶವಿರಬೇಕು. ಅದಕ್ಕೆ ಯಾವ ತೆರಿಗೆ, ಸುಂಕವೂ ಇರಬಾರದು. ಈ ಸವುಳು ಮಣ್ಣನ್ನು ಕೆರೆದು ಹಾಕುವುದರಿಂದ ಭೂಮಿ ಉತ್ತಮಗೊಳ್ಳುತ್ತದೆಯೆಂಬುದನ್ನು ನೆನಪಿಡಬೇಕು. ಸವುಳು ಮಣ್ಣಿನ ಕ್ಷಾರಜಲವನ್ನೂ ತಿನ್ನಲು ಯೋಗ್ಯವಲ್ಲದ ಎಣ್ಣೆಗಳನ್ನೂ ಹಳ್ಳಿಗಳಲ್ಲಿ ಸಾಬೂನು ಮಾಡಲು ಉಪಯೋಗಿಸಬೇಕು.

೯. ದೀಪ : ಬೇವು, ಪಾರ್ಡಿ, ಹಿಪ್ಪೆ, ಹೊಂಗೆ ಮುಂತಾದ ಸೇವನೆಗೆ ಯೋಗ್ಯವಲ್ಲದ ಎಣ್ಣೆಗಳಿಗೆ ಈಗ ಉಪಯೋಗ ಬಹಳ ಕಡಮೆ. ಅವನ್ನು ದೀಪಕ್ಕಾಗಿ ಬಳಸಬೇಕು. ದೀಪದ ವಿಷಯದಲ್ಲಿ ಪ್ರತಿ ಗ್ರಾಮವೂ ಸ್ವಾವಲಂಬಿಯಾಗಿರುವಂತೆ ಪ್ರಯತ್ನಿಸಬೇಕು.

ಅಖಿಲ ಭಾರತ ಗ್ರಾಮೋದ್ಯೋಗ ಸಂಘದವರು ತಯಾರಿಸಿದ 'ಮಗನ್ ದೀಪ' ದಂಥ ವನಸ್ಪತಿ ತೈಲದ ದೀಪಗಳನ್ನು ಅಲ್ಲಲ್ಲಿ ಪ್ರದರ್ಶಿಸಬೇಕು. ಸ್ಥಳೀಯ ಕೆಲಸಗಾರರು ಇವನ್ನು ಮಾಡಲು ಪ್ರೋತ್ಸಾಹಿಸಬೇಕು.

೧೦. ಕಾಗದ ಮಾಡುವುದು : ೧. ಕಾಗದ ಮಾಡಲು ಬೇಕಾದ ಸಾಮಗ್ರಿ ಸ್ಥಳದಲ್ಲಿಯೆ ಸಿಗುವ ಕಡೆ ಸೆರೆಮನೆಗಳಲ್ಲಿ ಸರಕಾರ ಈ ಕೈಗಾರಿಕೆಯನ್ನು ಪ್ರಾರಂಭಿಸಬಹುದು. ಇದಕ್ಕಾಗಿ ಸ್ಥಳದಲ್ಲಿ ಸಿಗುವ ಕಚ್ಚಾ ಸಾಮಗ್ರಿಯ ಪರಿಶೀಲನೆಯನ್ನು ಒಬ್ಬ ತಜ್ಞನಿಂದ ಮಾಡಿಸಬೇಕು.

೨. ಕಾಗದ ಮಾಡಲು ಬೇಕಾಗುವ ರಾಸಾಯನಿಕ ಪದಾರ್ಥಗಳನ್ನು ಸಹಕಾರ ಸಂಘಗಳು ಈ ಕೈಗಾರಿಕೆಯ ಕೇಂದ್ರಗಳಿಗೆ ನಿಗದಿಯಾದ ಬೆಲೆಗೆ ಒದಗಿಸಬೇಕು.

೩. ಇಂಥ ಎಲ್ಲಾ ಕೈಗಾರಿಕೆಗಳಿಗೂ ಅಗತ್ಯವಾಗುವ ಯಂತ್ರೋಪಕರಣಗಳನ್ನು ಮಾಡಲು ಒಂದು ಕೇಂದ್ರ ಉದ್ಯೋಗ ಮಂದಿರವಿರಬೇಕು. ಆಧುನಿಕ ಉಪಕರಣಗಳನ್ನು ಸಂಘಗಳು ಕೆಲಸಗಾರರಿಗೆ ಒದಗಿಸಬೇಕು.

೪. ಕಾಗದ ಮಾಡಲು ಉಪಯೋಗವಾಗುವ ಕಚೇರಿ ಹಳೇ ಕಾಗದಪತ್ರ, ಚಿಂದಿಕಾಗದ, ಸರಕಾರಿ ಅಡವಿಗಳಲ್ಲಿರುವ ಹುಲ್ಲು, ಇವನ್ನು ಕಾಗದದ ತಿಳಲು ಮಾಡಲು ಕಾಗದದ ಕೈಗಾರಿಕೆಯ ಕೇಂದ್ರಗಳಿಗಾಗಿ ಮೀಸಲಾಗಿಡಬೇಕು. ಸಂಘಗಳ ಮೂಲಕ ಒದಗಿಸಬೇಕು. ಅದೇ ರೀತಿ ಕೇಂದ್ರಗಳು ಮಾಡಿದ ಕಾಗದವನ್ನು ಈ ಸಂಘಗಳ ಮೂಲಕವೇ ಸರಕಾರ ತನ್ನ ಕಚೇರಿ ಕಾಗದ ಪತ್ರಗಳಿಗೆ ಬಳಸಲು ಕೊಳ್ಳಬೇಕು. ಕೈಗಾರಿಕೆಗೆ ನಾಲ್ಕು ಕಾಸು ಗಿಟ್ಟುವಂತೆ ಧಾರಣೆ ಕಟ್ಟಬೇಕು.

೫. ತರಬೇತು – ಈ ಕೇಂದ್ರಗಳಿಗೆ ಬೇಕಾದ ಶಿಕ್ಷಕರನ್ನು ಪ್ರಾಂತೀಯ ಶಿಕ್ಷಣ ಕೇಂದ್ರದಲ್ಲಿ ತರಬೇತು ಮಾಡಬೇಕು.

೬. ಕೈಕಾಗದದ ಸಾಗಾಣಿಕೆಗೆ ರೈಲಿನಲ್ಲಿ ಮೊದಲು ಅವಕಾಶ ಕೊಡುವಂತೆ ವ್ಯವಸ್ಥೆ ಮಾಡಬೇಕು. ಹೆಚ್ಚಿನ ಸುಂಕ, ತೆರಿಗೆ ಯಾವುದನ್ನೂ ಅದಕ್ಕೆ ಹಾಕ

ಬಾರದು.

೧೧. **ಕುಂಬಾರ ಗೆಲಸ** : ೧. ಇದಕ್ಕೆ ಮೊಟ್ಟಮೊದಲು ಮಾಡಬೇಕಾದುದು ಆ ಪ್ರಾಂತದ ಜೇಡಿಮಣ್ಣಿನ ಪರಿಶೀಲನೆ, ಪರೀಕ್ಷೆ, ಸರಕಾರ ಇದನ್ನು ಮಾಡಬೇಕು.

೨. ಜೇಡಿಮಣ್ಣನ್ನು ಕಲೆಸುವುದೂ ಒಂದು ಕಲೆ. ಅದಕ್ಕೆ ರಸಾಯನಶಾಸ್ತ್ರ ಜ್ಞಾನವೂ ಬೇಕು. ಆದುದರಿಂದ ಸಹಕಾರ ಸಂಘ, ಸೆರೆಮನೆ, ಇಂಥ ಮಧ್ಯಪ್ರದೇಶ ಗಳಲ್ಲಿ ಇದನ್ನು ಮಾಡಬೇಕು. ಆ ಮೇಲೆ ಆ ಮಣ್ಣನ್ನು ಬೇರೆ ಬೇರೆ ಕುಂಬಾರರಿಗೆ ಕೊಡಬೇಕು. ಈಗ ಕೆಲಸ ಮಾಡುತ್ತಿರುವ ಕುಂಬಾರರಿಗೇ ಮಣ್ಣನ್ನು ಶಾಸ್ತ್ರೀಯ ವಾಗಿ ಕಲೆಸುವ ಕಲೆಯನ್ನು ಕಲಿಸಿದರೂ ಸರಿಯೆ.

೩. ಉಳಿದ ಕೈಗಾರಿಕೆಗಳಿಗಿದ್ದ ಹಾಗೆ ಸಹಕಾರ ಸಂಘಗಳು ಕುಂಬಾರನ ಚಕ್ರವನ್ನೂ (ಸುಧಾರಿಸಿದುದು) ಮಣ್ಣನ್ನೂ ಒದಗಿಸಬೇಕು.

೪. ಕೆಲವು ಗಡಿಗೆ – ಮಡಕೆಗಳನ್ನು ನಯ ಮಾಡಿ ಸುಡುವುದನ್ನು ಒಟ್ಟಾಗಿ ಮಾಡಬೇಕು. ಮಣ್ಣನ್ನು ಕಲೆಸುವುದು, ಸುಡುವುದು, ನಯ ಮಾಡುವುದು ಪರಸ್ಪರ ಸಹಕಾರದಿಂದ ನಡೆಯಬೇಕು. ಹೆಚ್ಚು ಶಾಖ ಬೇಕಾಗದ ಪಾತ್ರೆಗಳನ್ನು ಸುಡಲು ಹಳ್ಳಿಗಳಲ್ಲಿ ಈಗ ಮಾಡುತ್ತಿರುವಂಥವು-ಉತ್ತಮ ಸಲಕರಣೆಗಳನ್ನು ಒದಗಿಸ ಬೇಕು. ಸರಿಯಾಗಿ ಕಟ್ಟಿದ ಕುಲುಮೆಯಲ್ಲಿ ಉರವಲಿನ ವೆಚ್ಚ ಕಡಮೆ.

ಹೆಂಚು ಇಟ್ಟಿಗೆ ಸುಡಲು ಬೇಕಾದ ದೊಡ್ಡ ಕುಲಿಮೆಗಳನ್ನು ಸಹಕಾರ ರೀತಿ ಯಲ್ಲಿ ಏರ್ಪಡಿಸಬೇಕು; ಉದಾ-ಮಣ್ಣು ಕಲೆಸುವುದು, ಉತ್ತಮ ರೀತಿಯ ಮಾದರಿ ಗಳ ರಚನೆ, ಸುಡುವುದು, ನಯ ಮಾಡುವುದು.

೧೨. **ನೈರ್ಮಲ್ಯ–ಗೊಬ್ಬರ** : ೧. ಹಳ್ಳಿಗಳಲ್ಲಿ ಎಂಥ ಕಕ್ಕಸುಗಳಿರಬೇಕೋ ಬೇರೆ ಬೇರೆ ಪ್ರಯೋಗ ಮಾಡಿ ನಿರ್ಧರಿಸಬೇಕು. ಹಲವು ಬಗೆಯ ಕಕ್ಕಸುಗಳು ಅನುಕೂಲವಾಗಿ ಕಾಣಬಹುದು. ಹಳ್ಳಿಗಳನ್ನು ನಿರ್ಮಲವಾಗಿಡಲು ಈ ಕಕ್ಕಸು ಪ್ರಯೋಗಗಳು ಅಗತ್ಯ. ಬೈರಿಗೆ-ಗುಂಡಿ ಮಂತ್ರಿಗಳನ್ನು ಹಳ್ಳಿಯಲ್ಲಿ ನಾಲ್ಕಾರು ಕಡೆ ಮಾಡುವುದು ಒಳ್ಳೆಯದು.

೨. ಮಲ ಮೂತ್ರಗಳನ್ನು ಗೊಬ್ಬರವಾಗಿ ಮಾಡಲು ಖಾಸಗಿ ಗುತ್ತಿಗೆದಾರ ರಿಗೆ ಗುತ್ತಿಗೆ ಕೊಡಬೇಕು. ಅವರು ಸಿದ್ಧ ಮಾಡಿದ ಗೊಬ್ಬರಕ್ಕೆ ತಕ್ಕಂತೆ ಅವರಿಗೆ ಪ್ರೋತ್ಸಾಹ ಧನವನ್ನು ಕೊಟ್ಟು ಆಕರ್ಷಿಸಬೇಕು. ಲಾಭ ಸಿಗದಿದ್ದರೆ ಯಾರೂ ಕೆಲಸ ಮಾಡರು. ಈ ಪದ್ಧತಿ ಬೆಳೆಯುವವರೆಗೆ ಕೆಲವು ಕಾಲ ಸಹಾಯ ಕೊಡಬೇಕು.

೩. ಹಳ್ಳಿಯ ನೈರ್ಮಲ್ಯದ ದೃಷ್ಟಿಯಿಂದ ಊರಿನೊಳಗೆ, ವಾಸದ ಮನೆ ಗಳಲ್ಲಿಯೆ ದನ ಕಟ್ಟುವ ಪದ್ಧತಿಯನ್ನು ಪರಿಶೀಲಿಸಬೇಕು. ಗೋಶಾಲೆ–ನಂದಿಶಾಲೆ, ಅದರ ವ್ಯವಸ್ಥಾಪಕರು ಏರ್ಪಾಡಾಗದೆ ಈ ಸಮಸ್ಯೆ ಹರಿಯದು. ಒಂದು ದಿನದಲ್ಲಿ ಆಗುವ ಕೆಲಸವಲ್ಲ. ★

ಜನಪದ ವಿಚಾರ

- ನಿಮ್ಮ ಮಿತ್ರರಿಗೂ ಚಂದಾದಾರರಾಗಲು ತಿಳಿಸಿ
- ವಾರ್ಷಿಕ ಚಂದಾ ೨೫ ರೂ.
- ಪತ್ರಿಕೆ ತಲುಪದಿದ್ದರೆ, ನಿಮ್ಮ ವಿಳಾಸ ಬದಲಾದರೆ ತಿಳಿಸಿ,
- ಲೇಖನಗಳನ್ನು ಕಳುಹಿಸಿ.

ಸಾಮಾಜಿಕ, ಆರ್ಥಿಕ ವಿಶ್ಲೇಷಣೆಗಳ ಅಧ್ಯಯನ ವರದಿಗಳಿಗೂ ಸ್ವಾಗತ.

ನಮ್ಮ ವಿಳಾಸ :– ಜನಪದ ವಿಚಾರ

ಜನಪದ ಸೇವಾ ಟ್ರಸ್ಟ್,

ಮೇಲುಕೋಟೆ–571431

ಕರ್ನಾಟಕ.

KRNM 44

ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಮೇಲುಕೋಟೆಯ
ಜನಪದ ಸೇವಾ ಟ್ರಸ್ಟ್ ಮುದ್ರಣಾಲಯದಲ್ಲಿ, ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.
ಸಂಪಾದಕರು : ಎಸ್. ಪಟ್ಟಾಭಿರಾಮನ್ ಸಹಾಯಕ ಸಂಪಾದಕರು : ಸುರೇಂದ್ರ ಕೌಲಗಿ